ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನ

ಮಾಸ ಪತ್ರಿಕೆ

ಸೆಪ್ಟೆಂಬರ್ 2024
ಸಂಪುಟ 20 ಸಂಚಿಕೆ 09
ಸಂಚಿಕೆ ಬೆಲೆ ರೂ. 1/-







ವಿದ್ಯಾಮಂದಿರದೊಳಗೆ ಹೊಸ ಹುರುಪಿನ ಸಂಭ್ರಮದ ಸ್ವಾತಂತ್ರ್ಯೋತ್ಸವ





ವೈಭವದ ಗಣೇಶ ಚತುರ್ಥಿ ಸೊಬಗು ಕಂಡ ಬೆಂಗಳೂರು ಬಂಟರ ಸಂಘ



# 324, Bunts' Sangha Complex,
Chord Road, Vijayanagar,
Bengaluru - 560040.
Ph.: 080-233599323 | 23399635
Email : info@buntsanghablr.com




# ನೆಮ್ಮದಿಯ ನಾಳೆಗಳು
# ಪ್ರಕೃತಿಯ ಸಾಂಗತ್ಯದಲ್ಲಿ
# ಕೈಗೆಟುಕುವ ಬೆಲೆಯಲ್ಲಿ

- Grand Entry Arch & Security
- 24x7 CCTV Surveillance
- Badminton Court
- Basketball Court
- Swimming Pool
- Kid's Play Area
- Walking & Jogging Path
- Wellness Spa & Yoga Hall
- Gymnasium
- Buggy Transport

## Save upto ₹4 Lakhs

*Limited Period Offer

1,700 Sq. Ft Onwards* | ₹28 Lakhs Onwards* | Behind NITK Surathkal, Mangaluru


Gated Community


Lush Oxygen Park


20,000 sq.ft Clubhouse

*Limited Period Offer

## VAIKUNTAM CITY
Behind NITK, Surathkal

Contact Us
+91 890-468-8886

Website
www.viturealty.com

# ಸ್ನೇಹ ಚಿಂತನೆ

*Monthly Magazine Published by*
**BUNTS' SANGHA BANGALORE**

VOL 20 | SEPTEMBER- 2024 | ISSUE 09

**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
**ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:**
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಸಂಪಾದಕ ಮಂಡಳಿ:**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಕುಮಾರ್ ಶೆಟ್ಟಿ
ಶ್ರೀ ಸಂದೀಪ್ ಶೆಟ್ಟಿ ಹೆಗ್ಗದ್ದೆ
ಶ್ರೀ ನವೀನ್ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಡಾ. ಶಾಲ್ಮಲೀ ಸುರೇಶ್
ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಶ್ರೀಮತಿ ನಂದಿನಿ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| ಮಹಿಳಾ ವಿಭಾಗ – 'ದಸರಾ ಆಚರಣೆ' | 5 |
| "ಮೋದಕ ಪ್ರಿಯಾ, ಗರಿಕೆಯ ಅಲಂಕೃತ ಆರಾಧಿತನಿಗೆ ಚೌತಿಯ ಸಂಭ್ರಮ....!" | 6 |
| ಕ್ರೀಡಾ ವಿಭಾಗ | 8 |
| RNS Vidyaniketan - I and Composite PU College Independence Day Report | 10 |
| ಸ್ವಾತಂತ್ರ್ಯ ದಿನಾಚರಣೆಯ ವರದಿ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ –II ಮತ್ತು ಪದವಿಪೂರ್ವ ಕಾಲೇಜು | 12 |
| ಸಾವಿರಾರು ಮರಗಳ ತಾಯಿ – ಸಾಲು ಮರದ ತಿಮ್ಮಕ್ಕ | 13 |
| ಸೆಪ್ಟೆಂಬರ್ 5ರ ಶಿಕ್ಷಕರ ದಿನಾಚರಣೆ | 16 |
| ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಗಣೇಶ ಚತುರ್ಥಿ ಆಚರಣೆ | 17 |
| Matrimonial Services | 19 |
| ಭವ್ಯ ಭವಿಷ್ಯಕ್ಕೆ ಐದು 'ಮನಸ್ಸುಗಳು' | 23 |
| RNS Evening College Graduation – 2024 | 25 |

**ಮುಖ ಪುಟ**

**ವಿದ್ಯಾಮಂದಿರದೊಳಗೆ ಹೊಸ ಹುರುಪಿನ ಸಂಭ್ರಮದ ಸ್ವಾತಂತ್ರ್ಯೋತ್ಸವ**

**ವೈಭವದ ಗಣೇಶ ಚತುರ್ಥಿ ಸೊಬಗು ಕಂಡ ಬೆಂಗಳೂರು ಬಂಟರ ಸಂಘ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. – ಸಂಪಾದಕ ಮಂಡಳಿ

# ಸಂಪಾದಕೀಯ



"ಇಪ್ಪತ್ತೊಂದನೆಯ ಶತಮಾನ ಭಾರತದ ಶತಮಾನ" ಎಂಬ ಮಾತು ಇತ್ತೀಚಿನ ವರ್ಷಗಳಲ್ಲಿ ಜಗತ್ತಿನ ವಿಭಿನ್ನ ಮೂಲೆಗಳಿಂದ ಕೇಳಿ ಬರುತ್ತಿದೆ. ಇನ್ನೊಂದೆಡೆಯಲ್ಲಿ ಭಾರತ ತನ್ನ ಅಭಿವೃದ್ಧಿ ಪಥದ ಕವಲಾಗಿ 2047ನ್ನು ಎದುರು ನೋಡುತ್ತಿದೆ. ಅಭಿವೃದ್ಧಿ ಹೊಂದಿದ ದೇಶಗಳಿಗೆ ಸರಿಸಾಟಿಯಾಗಿ ಭಾರತವೂ ಬೆಳೆಯಬೇಕು ಎಂಬುದು 2047ರ ಗುರಿ. ತೀವ್ರಗತಿಯ ಪ್ರಗತಿಯನ್ನು ಕಂಡುಕೊಂಡಿರುವ ಬಹುತೇಕ ದೇಶಗಳ ಯಶಸ್ಸಿನ ರಹಸ್ಯವೇ ಯುವಶಕ್ತಿ. ಅಭಿವೃದ್ಧಿಯ ಕಟ್ಟಾಳುಗಳಾದ ಯುವಜನಾಂಗವನ್ನು ಸಮರ್ಥವಾಗಿ ಮತ್ತು ಸಕಾಲಿಕವಾಗಿ ಬಳಸಿಕೊಂಡ ಪರಿಣಾಮವಾಗಿಯೇ ಯುರೋಪ್ ಮತ್ತು ಅಮೇರಿಕಾ ಭೂಭಾಗದ ಅನೇಕ ದೇಶಗಳು ಇಡೀ ಜಗತ್ತು ಬೆರಗುಗೊಳ್ಳುವಂತಹ ಸಾಧನೆ ಮತ್ತು ಪ್ರಗತಿಗೆ ಸಾಕ್ಷಿಯಾದವು. ಭಾರತದಲ್ಲಿ ಇದೀಗ ಯುವ ತಲೆಮಾರಿನ ಪರ್ವ. 2047ರ ಕನಸು ಆಕೃತಿ ಪಡೆದದ್ದು ಈ ಹಿನ್ನೆಲೆಯಲ್ಲಿಯೇ. ವಿಭಿನ್ನ ಕ್ಷೇತ್ರಗಳಲ್ಲಿನ ಪ್ರಗತಿಗೆ ಹಿನ್ನೆಲೆ ಎಂಬಂತೆ ಭಾರತದ ಯುವಪಡೆ ಬೆನ್ನೆಲುಬಾಗಿ ನಿಂತಿದೆ. ಹಿರಿಯರ ಅನುಭವ ಕೇಂದ್ರಿತ ಮತ್ತು ಪರಿಣಾಮಕಾರಿ ಮಾರ್ಗದರ್ಶನ ಈ ಯುವಪಡೆಗೆ ಶ್ರೀರಕ್ಷೆಯಾಗಿದೆ. ಇಂಥದ್ದೊಂದು ವಿಶಿಷ್ಟ ಲೋಕದೃಷ್ಟಿಯೊಂದಿಗೆ "ಸ್ನೇಹ ಚಿಂತನೆ" ಪತ್ರಿಕೆ ಹೊಸ ಆಶಯಗಳ ಜತೆ ಪ್ರಕಟಗೊಳ್ಳುತ್ತಿದೆ.

ಕರ್ನಾಟಕ ಕರಾವಳಿಯ ಭೂಭಾಗವು ಹಿಂದಿನಿಂದಲೂ ಬಂಟ ಸಮುದಾಯದ ಎಲ್ಲಾ ವರ್ಗಗಳ ಆವಾಸದ ನೆಲೆ ಎನ್ನಬಹುದು. ಇಲ್ಲಿನ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ರಂಗಗಳ ಉನ್ನತಿಗೆ ಬಂಟರ ಕೊಡುಗೆ ಮಹತ್ವದ್ದು. ಈ ಸಮುದಾಯದ ಪ್ರತಿನಿಧಿಗಳು ನಿರಂತರವಾಗಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಅಪ್ರತಿಮ ಸಾಧನೆಗೈದಿದ್ದಾರೆ. ಮುಖ್ಯವಾಗಿ ಕೃಷಿ ಮತ್ತು ಉದ್ಯಮ ರಂಗದಲ್ಲಿ ಬಂಟರ ಪ್ರಾತಿನಿಧ್ಯ ಗಮನ ಸೆಳೆಯುವಂಥದ್ದು. ಇಂತಹ ಉನ್ನತ ಸ್ಥಿತಿಗತಿಯ ನಡುವೆಯೂ ಕರಾವಳಿ ಪ್ರದೇಶದ ಉದ್ದಗಲಕ್ಕೂ ಲಕ್ಷಾಂತರ ಮಂದಿ ಬಂಟರು ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದಾರೆ ಎಂಬುದು ವಿಷಾದನೀಯ ಸಂಗತಿ. ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿ ನೆಲೆ ಕಂಡಿರುವ ಅಸಂಖ್ಯಾತ ಬಂಟರು ಹಲವು ವಿಧದ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿ ಬದುಕುತ್ತಿದ್ದಾರೆ. ಬಡತನ ರೇಖೆಗಿಂತ ಕೆಳಗಿನ ಬಂಟ ಕುಟುಂಬಗಳಿಗೆ ಅನ್ನ, ಅಕ್ಷರ, ಆರೋಗ್ಯ, ಆಸರೆ, ಉದ್ಯೋಗ ಸಂಬಂಧಿ ಸೌಲಭ್ಯಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಗಂಭೀರ ಪ್ರಯತ್ನಗಳು ನಡೆಯಬೇಕಾಗಿದೆ. ಬೆಂಗಳೂರು ಬಂಟರ ಸಂಘವು ಇಂತಹ ಸಾಮಾಜಿಕ ಉಪಯುಕ್ತ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತ ಬಂದಿದೆ.

"ಸ್ನೇಹ ಚಿಂತನೆ" ಕೇವಲ ವರದಿ ಕೇಂದ್ರಿತವಾದ ಸಂಚಿಕೆಯಲ್ಲ. ದಾಖಲೀಕರಣವೊಂದೇ ಇದರ ಕೇಂದ್ರ ಕಾಳಜಿಯಲ್ಲ. ಹಿರಿಯ ಮತ್ತು ಉದಯೋನ್ಮುಖ ಲೇಖಕ–ಲೇಖಕಿಯರು ಬರೆದ ಉಪಯುಕ್ತ ಲೇಖನಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತ ಬಂದಿದೆ. ಮುಂದೆಯೂ ಇಂತಹ ಪ್ರಯೋಗಗಳು ಆದ್ಯತೆಯ ಮೇರೆಗೆ ಅನುಷ್ಠಾನಗೊಳ್ಳಲಿದೆ. ಬಂಟ ಸಮುದಾಯದ ಆಗು–ಹೋಗುಗಳಿಗೆ ಸಂಬಂಧಿಸಿದ ಕೆಲ ಬರಹಗಳು ಇಲ್ಲಿ ಮೂಡಿಬಂದಿವೆ. ಸ್ನೇಹ ಚಿಂತನೆ ಸಂಚಿಕೆಯು ಒಂದು ವಿಶಿಷ್ಟ ಆಕೃತಿಯಾಗಿ ಹೊರಹೊಮ್ಮುವ ನಿಟ್ಟಿನಲ್ಲಿ ತಮ್ಮ ಪ್ರಗತಿಪರವಾದ ಯೋಚನೆಗಳೊಂದಿಗೆ ಕೆಲಸ ಮಾಡುತ್ತಿರುವ ಸಂಘದ ಎಲ್ಲಾ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಸರ್ವ ಸದಸ್ಯರುಗಳ ಶ್ರಮ ಗಣ್ಯವಾದುದು. ಸಂಘದ ವಿಭಿನ್ನ ಚಟುವಟಿಕೆಗಳನ್ನು ಕ್ರಿಯಾತ್ಮಕವಾಗಿ ನಿರ್ವಹಿಸುವ ಹಂತದಲ್ಲಿ ನಮ್ಮ ತಂಡ ಅಳವಡಿಸಿಕೊಂಡ ಸಮನ್ವಯ ದೃಷ್ಟಿ ಮೌಲ್ಯಾತ್ಮಕವಾದುದು. ಈ ಸಂಚಿಕೆಯನ್ನು ರಚನಾತ್ಮಕವಾಗಿ ಸಜ್ಜುಗೊಳಿಸುವ ಹಂತದಲ್ಲಿ ನನ್ನೊಂದಿಗೆ ಕೈಜೋಡಿಸಿದ ಸಂಪಾದಕ ಮಂಡಳಿಯ ಸರ್ವ ಸದಸ್ಯರು, ಸಲಹೆಗಾರರು ಹಾಗೂ ಎಲ್ಲಾ ಸಿಬ್ಬಂದಿಗಳ ಶ್ರಮ ಸ್ಮರಣೀಯ. ಸಂಚಿಕೆಗೆ ಜಾಹೀರಾತು ನೀಡಿ ಸಹಕರಿಸಿದ ಸರ್ವರಿಗೂ ಹೃದಯಾಂತರಾಳದ ವಂದನೆಗಳು. ಭವಿಷ್ಯದ ದಿನಗಳಲ್ಲಿ ನಮ್ಮ ಸಂಘವು ಮಗದಷ್ಟು ಜನೋಪಯೋಗಿ ಕೆಲಸಗಳನ್ನು ಸಮುದಾಯ ಬಾಂಧವರ ಹಿತದೃಷ್ಟಿಯಿಂದ ನಿರ್ವಹಿಸುವಂತಾಗಲಿ. ಅಂಥದ್ದೊಂದು ಅಪ್ಪಟ ನಿರೀಕ್ಷೆಯಲ್ಲಿ ನಾನು, ನೀವು ಮತ್ತು............

**ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**

# ಅಧ್ಯಕ್ಷರ ಮಾತು

## ಜ್ಞಾನ ದೇಗುಲದ ಶಿಕ್ಷಕರಿಗೆ ನನ್ನದೊಂದು ಪ್ರಣಾಮಗಳು



ಕಲ್ಲನ್ನು ಶಿಲೆಯಾಗಿಸುವವರು ಶಿಕ್ಷಕರು. ಭಾರತದ ಮಾಜಿ ರಾಷ್ಟ್ರಪತಿ ಹಾಗೂ ಶಿಕ್ಷಣ ತಜ್ಞರಾದ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದಂದು ಆಚರಿಸಲ್ಪಡುವ ಸೆಪ್ಟಂಬರ್ 5ರಂದು ಶಿಕ್ಷಕರ ದಿನಾಚರಣೆಯನ್ನು ನಮ್ಮ ಬಂಟರ ಸಂಘದ ವತಿಯಿಂದ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ ಯುವ ಸಮಿತಿಯು ಬೋಧಕ ವೃಂದದವರೊಂದಿಗೆ ಅವರಿಗೆ ಅಭಿನಂದನೆ ಸಲ್ಲಿಸುವ ಮೂಲಕ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-II ರಲ್ಲಿ ಪೋಷಕರ ಸಭೆಯನ್ನು ಆಯೋಜಿಸಿ ಸಲಹೆ ಸೂಚನೆಗಳನ್ನು ಸ್ವೀಕರಿಸಲಾಯಿತು. ಶಾಲೆಗೆ ಅಗತ್ಯವಿರುವ ಸವಲತ್ತು ಮತ್ತು ಪರಿಕರಗಳನ್ನು ಖರೀದಿಸುವ ಬಗ್ಗೆ ಯೋಜನಾ ಸಮಿತಿಯನ್ನು ರಚಿಸಲಾಗಿದೆ.

2024-26ನೇ ಸಾಲಿನ ಸಂಘದ ಕಾರ್ಯಯೋಜನೆಗಳ ಬಗ್ಗೆ ರೂಪುರೇಷೆಗಳನ್ನು ಸಿದ್ಧಪಡಿಸಲಾಗಿದ್ದು, ಕಾರ್ಯಕಾರಿ ಸಮಿತಿ ಸದಸ್ಯರುಗಳು ತಮ್ಮ ಉಪ ಸಮಿತಿಯನ್ನು ರಚಿಸಿದ್ದು, ಎರಡು ವರ್ಷಗಳವರೆಗಿನ ಚಟುವಟಿಕೆಗಳ ಪಟ್ಟಿಯನ್ನು ತಯಾರಿಸಲಾಗಿದೆ.

ನಮ್ಮ ಆಡಳಿತ ಸಮಿತಿಯ ಪ್ರಥಮ ಕಾರ್ಯಕ್ರಮವಾದ ಗಣೇಶ ಚತುರ್ಥಿಯನ್ನು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ಅತ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಸಂಘದಲ್ಲಿ ಮುಂದೆ ನಡೆಯಲಿರುವ ಎಲ್ಲಾ ಕಾರ್ಯಕ್ರಮಗಳಲ್ಲಿ ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ಇಂತಿ ತಮ್ಮ ಪ್ರೀತಿಯ
**ಸಿಎ. ಅಶೋಕ್ ಶೆಟ್ಟಿ ಎಂ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಯವರ ವರದಿ



## ಸದಸ್ಯ ಬಾಂಧವರೆಲ್ಲರಿಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳು

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–I ಮತ್ತು II ರಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಗೌರವ ಪೂರ್ವಕವಾಗಿ ಆಚರಿಸಲಾಯಿತು. ವಿಜಯನಗರ ಶಾಲಾ ಸಂಕೀರ್ಣದಲ್ಲಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ನಿಕೇತನ್ ಕನ್ಸಲ್‌ಟೆಂಟ್‌ನ ಚೀಫ್ ಕನ್ಸಲ್‌ಟೆಂಟ್ ಕರ್ನಲ್ ಶ್ಯಾಮ್ ಸುಂದರ್‌ರವರು, ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರೊಂದಿಗೆ ಧ್ವಜಾರೋಹಣವನ್ನು ನೆರವೇರಿಸಿದರು. ಯಲಚಗುಪ್ಪೆ ಶಾಲಾ ಸಂಕೀರ್ಣದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ವಾಯುಸೇನೆಯ ನಿವೃತ್ತ ಸಾರ್ಜೆಂಟ್ ಕರುಂಬಯ್ಯ ಸಿ.ಎ.ಯವರು, ಸಂಘದ ಉಪಾಧ್ಯಕ್ಷರು, ಮಹಿಳಾ ಉಪಾಧ್ಯಕ್ಷರು, ಜಂಟಿ ಕಾರ್ಯದರ್ಶಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರೊಂದಿಗೆ ಧ್ವಜಾರೋಹಣವನ್ನು ನೆರವೇರಿಸಿದರು.

ದಿನಾಂಕ 07.09.2024ರಂದು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ವರ್ಷಂಪ್ರತಿಯಂತೆ ಈ ವರ್ಷವೂ ಗಣೇಶ ಚೌತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಶೋಭಾ ಶೇಖ, ಸಂಚಾಲಕರಾದ ಪ್ರಸಾದ್ ಕುಮಾರ್ ಶೆಟ್ಟಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು ಹಾಗೂ ಸಹಕರಿಸಿದ ಎಲ್ಲಾ ದಾನಿಗಳಿಗೂ ಹೃತ್ಪೂರ್ವಕ ಅಭಿನಂದನೆಗಳು. ಅದೇ ದಿನ ಮಧ್ಯಾಹ್ನ "ಕರ್ಣ ಪರ್ವ" ಯಕ್ಷಗಾನವನ್ನು ಯಶಸ್ವಿಯಾಗಿ ಆಯೋಜಿಸಿದ ಯಕ್ಷಗಾನ ಸಮಿತಿಯ ಚೇರ್‌ಪರ್ಸನ್ ಮೂಡುಬಗೆ ಶ್ರೀ ಸಂತೋಷ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ಚರಣ್‌ರಾಜ್ ಶೆಟ್ಟಿ ಮತ್ತು ಅವರ ತಂಡಕ್ಕೆ ಹೃತ್ಪೂರ್ವಕ ಅಭಿನಂದನೆಗಳು.

ದಿನಾಂಕ 05.09.2024ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸುವ ಮೂಲಕ ಎಲ್ಲಾ ಶಿಕ್ಷಕರಿಗೂ ಗೌರವವನ್ನು ಸಲ್ಲಿಸಲಾಯಿತು.

ಇಂತಿ ತಮ್ಮ ಪ್ರೀತಿಯ
**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

# ಬಂಟರ ಸಂಘ ಬೆಂಗಳೂರು

**ಮಹಿಳಾ ವಿಭಾಗ – 'ದಸರಾ ಆಚರಣೆ'**

**ದಿನಾಂಕ : 05.10.2024, ಶನಿವಾರ, ಮಧ್ಯಾಹ್ನ 2.30 ರಿಂದ**

**ಕಾರ್ಯಕ್ರಮಗಳು :–**

- ದೇವಿ ಪೂಜೆ
- ಲಲಿತಾ ಸಹಸ್ರನಾಮ
- ಭಜನೆ
- ಪ್ರಸಾದ ವಿತರಣೆ
- ಲಘು ಉಪಾಹಾರ
- ದಾಂಡಿಯಾ ನೃತ್ಯ

ವಿ.ಸೂ. : ದಾಂಡಿಯಾ ನೃತ್ಯ ಹಾಗೂ ಭಜನೆ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: 20.09.2024 ರ ಒಳಗೆ ಈ ಕೆಳಗಿನ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ.

| | | | |
|---|---|---|---|
| ಅಮೃತಾ ವಿ. ಶೆಟ್ಟಿ | : 9902076085 | ಮಮತಾ ಪಿ. ಶೆಟ್ಟಿ | : 9900087520 |
| ಚೇತನಾ ಶೆಟ್ಟಿ | : 9880299389 | ಜ್ಯೋತಿ ಆರ್. ಶೆಟ್ಟಿ | : 9845838128 |
| ಸುನೀತಾ ಜೆ. ಶೆಟ್ಟಿ | : 9632191276 | ವಿಜಯಲಕ್ಷ್ಮಿ ಎಸ್. ಶೆಟ್ಟಿ | : 9448452719 |

ಸದಸ್ಯರೆಲ್ಲರೂ ತಮ್ಮ ಬಂಧು–ಬಾಂಧವರೊಡಗೂಡಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಈ ಮೂಲಕ ವಿನಂತಿ.

**ಸರ್ವರಿಗೂ ಆದರದ ಸ್ವಾಗತ**

**ವಿಜಯ್ ಜೆ. ಶೆಟ್ಟಿ, ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿ.ಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಮಲ್ಲಿಕಾ ಕೆ. ಶೆಟ್ಟಿ**
ಸಂಚಾಲಕರು, ಮಹಿಳಾ ವಿಭಾಗ
ಮೊ: 9880349577

**ಯೋಗ್ಯ ಎಲ್. ರೈ**
ಚೇರ್‌ಪರ್ಸನ್, ಮಹಿಳಾ ವಿಭಾಗ
ಮೊ:9980892311

# CONGRATULATIONS



**Dr. Sharan Kumar Shetty**

Dr. Sharan Kumar Shetty, Professor & Head of the Department of MBA, AJ Institute of Engineering & Technology, was awarded with the prestigious "Dr. Abdul Kalam Educator Excellence Award" @ the Education Summit & Awards ceremony by the Dr.Kalam International Foundation for his outstanding contributions to education and Leadership.

Bunts Sangha Bangalore congratulates and wishes him all the best for his future endeavours.

# “ಮೋದಕ ಪ್ರಿಯಾ, ಗರಿಕೆಯ ಅಲಂಕೃತ ಆರಾಧಿತನಿಗೆ ಚೌತಿಯ ಸಂಭ್ರಮ....!”



**ಕೆ. ಸಂತೋಷ್ ಶೆಟ್ಟಿ ಮೊಳಹಳ್ಳಿ**

ಪಾರ್ವತಿ ದೇವಿಯು ಮೈ ಮೇಲಿನ ಮಣ್ಣಿನಿಂದ, ಮೂರ್ತಿಯನ್ನು ತಯಾರಿಸಿ, ಪುತ್ರ ಎಂದು ವ್ಯಾಖ್ಯಾನಿಸಿ, ಜೀವ ಕಳೆಯನ್ನು ಕೊಟ್ಟು, ದ್ವಾರಪಾಲಕನಾಗಿ ರಕ್ಷಿಸಿದ ಪರಮಾತ್ಮನೇ ಮುದ್ದು “ವಿನಾಯಕ...!” ನೂರಾರು ಹೆಸರುಗಳ ನಾಮಾಂಕಿತ, ಮೊದಲ ಪೂಜಿತ ಆರಾಧಿತನಿಗೆ ನಾಡಿನಾದ್ಯಂತ ಗಣೇಶ ಚತುರ್ಥಿಯ ಸಂಭ್ರಮ...!”

“ವಕ್ರತುಂಡ ಮಹಾಕಾಯ...., ಕೋಟಿ ಸೂರ್ಯ ಸಮಪ್ರಭ... ನಿರ್ವಿಘ್ನಂ ಕುರುಮೇ ದೇವಾ ಸರ್ವ ಕಾರ್ಯೇಷು ಸರ್ವದಾ.....!” ಎನ್ನುವಂತೆ ಗಣೇಶ ಚತುರ್ಥಿಯ ಸಂಭ್ರಮದ ವಾತಾವರಣದಲ್ಲಿ ನಾವಿದ್ದೇವೆ. ಗಣೇಶ ಚತುರ್ಥಿಯ ಸಂಭ್ರಮದ ಭಕ್ತಿಯ ಪರಾಕಾಷ್ಟೆಯನ್ನು ಹೊರ ಸೂಸುತ್ತದೆ. ಮೊದಲ ಪೂಜಿತ ಆರಾಧಿತನಿಗೆ ಚೌತಿಯ ಸಂಭ್ರಮ. ದೇಶದೆಲ್ಲಡೆ ಸಂಭ್ರಮದ ಚತುರ್ಥಿಯ ಕಳೆ ಕಟ್ಟುವ ದಿನ . ವಿಘ್ನ ವಿನಾಶಕನಿಗೆ ಸರ್ವ ಪೂಜೆ ಕಾರ್ಯ ಗಳನ್ನು ನೆರವೇರಿಸಿ, ಜಗತ್ತಿನ ಎಲ್ಲಾ ದೇವರುಗಳ ಮೊದಲ ಸ್ಥಾನವನ್ನು ಪಡೆದುಕೊಂಡ ಗಣಪತಿಗೆ ಮೊದಲ ಪೂಜಿತ ಆರಾಧಿತ ಎಂದು ಕರೆಯುವುದು ಈ ನೆಲದ ಭಕ್ತಿಯ ಗೌರವ..!”

ಸಂಭ್ರಮದ ಗಣೇಶ ಚತುರ್ಥಿಗೆ ನಾವೆಲ್ಲರೂ ಸಂಭ್ರಮದಿಂದ ಸಿದ್ಧವಾಗಿದ್ದೇವೆ.

**ಗಣೇಶ ಚತುರ್ಥಿಯ ಆಚರಣೆಯ ಕಥಾ ಮಹತ್ವ :**

ಗಣೇಶ ಚತುರ್ಥಿಯ ಆಚರಣೆ ದಂತಕಥೆಯಲ್ಲಿ ಉಲ್ಲೇಖವಾಗಿರುವಂತೆ, ಶ್ವೇತ ಕಲ್ಪದಲ್ಲಿ ಶಂಕರನು ತಾನಾಗಿಯೇ ಗಣೇಶನ ಮಸ್ತಕವನ್ನು ಕಡಿದು ಹಾಕಿದನು. ಆ ಕಥೆಯು ಶಿವಪುರಾಣದಲ್ಲಿ ಹೀಗೆ ಉಲ್ಲೇಖಿತವಾಗಿದೆ. ಪಾರ್ವತಿ ದೇವಿಯು ಜಯಾ ಮತ್ತು ವಿಜಯಾ ಎಂಬ ಹೆಸರಿನ ತನ್ನ ಗೆಳತಿಯರ ಸೂಚನೆಯಂತೆ ತನ್ನ ಮೈಮೇಲಿನ ಮಣ್ಣಿನಿಂದ ಒಂದು ಮೂರ್ತಿಯನ್ನು ತಯಾರಿಸಿದಳು. ಅದರಲ್ಲಿ ಜೀವಕಳೆಯನ್ನು ತುಂಬಿ ‘ಪುತ್ರ’ ಎಂದು ಅವನನ್ನು ಕರೆದು ತನ್ನ ಸ್ನಾನಮಂದಿರದ ಬಾಗಿಲಲ್ಲಿ ಕೂರಿಸಿದಳು. ‘ನೀನು ನನ್ನ ದ್ವಾರಪಾಲಕನಾಗಿದ್ದು ‘ಯಾರನ್ನೂ ಒಳಗೆ ಬಿಡಬೇಡ’ ಎಂದು ಕಟ್ಟಪ್ಪಣೆ ಮಾಡಿದಳು. ಆಗ ಮಹಾದೇವನೇ ಸ್ವತಃ ಪಾವರ್ತಿಯನ್ನು ಕಾಣಲು ಬಂದನು. ಆದರೆ ಆ ಬಾಲಕ, ಶಿವನನ್ನು ಒಳಗೆ ಬಿಡದೇ ಬಾಗಿಲಲ್ಲಿಯೇ ತಡೆದು ನಿಲ್ಲಿಸಿದನು. ಆಗ ಶಂಕರನು ಆ ಬಾಲಕನ ಜೊತೆಗೆ ಯುದ್ಧ ಮಾಡಿ ಅವನನ್ನು ಅಲ್ಲಿಂದ ಓಡಿಸಲು ತನ್ನ ಶಿವಗಣಕ್ಕೆ ಆಜ್ಞೆಯಿಟ್ಟನು. ಆ ಯುದ್ಧದಲ್ಲಿ ಗಣೇಶನು ತನ್ನ ಶೌರ್ಯದಿಂದ ಎಲ್ಲರನ್ನು ಹೊಡೆದು ಓಡಿಸಿದನು. ಆದರಿಂದ ಕುಪಿತನಾದ ಗೌರಿ ಪತಿಯು ಗಣೇಶನ ತಲೆಯನ್ನು ಕಡಿದು ಹಾಕಿದನು. ಪುತ್ರನ ಶಿರಚ್ಛೇದನದಿಂದ ಕ್ರುದ್ಧಳಾದ ಪಾವರ್ತಿಯು ಸಾವಿರಾರು ಶಕ್ತಿ ದೇವತೆಯನ್ನು ಉತ್ಪಾದನೆ ಮಾಡಿ ಅವರಿಗೆ ವಿಶ್ವಸಂಹಾರ ಮಾಡಲು ಆಜ್ಞೆಯನ್ನು ನೀಡಿದಳು. ಅದರಂತೆ ಎಲ್ಲಾ ಕಡೆಗೆ ಹಿಂಸಾತಾಂಡವ ನಡೆಯಲು ಋಷಿಗಳು ಭಕ್ತಿಯಿಂದ ವಿಶ್ವದ ರಕ್ಷಣೆಗಾಗಿ ಪ್ರಾರ್ಥಿಸಿದರು. ಆಗ ಅವಳು “ಶಿವನು ತಲೆ ಕಡಿದು ಹಾಕಿದ ನನ್ನ ಮಗನು ಬದುಕಿ ಬಂದರೆ ಮತ್ತು ಅವನನ್ನು ಸರ್ವಾಧ್ಯಕ್ಷ ಸ್ಥಾನದಲ್ಲಿ ಪಟ್ಟಾಭಿಷೇಕ ಮಾಡಿದರೆ ಮಾತ್ರ ಈ ಸಂಹಾರ ಕಾರ್ಯವನ್ನು ನಿಲ್ಲಿಸಲು ಹೇಳುತ್ತೇನೆ” ಎಂದಳು.

ಆಗ ದೇವತೆಗಳು ಹಾಗೇ ಆಗಲಿ ಎಂದು ಹೋಗಿ ದಾರಿಯಲ್ಲಿ ಒಂದೇ ಕೋರೆ ದಾಡೆಯುಳ್ಳ, ಮಲಗಿದ ಆನೆಯ ಮಸ್ತಕವನ್ನು ಕತ್ತರಿಸಿ ತಂದರು. ಅಭಮಂತ್ರಿಕ ನೀರಿನಿಂದ ಆ ಆನೆಯ ಮಸ್ತಕವನ್ನು ಸಿಂಚನ ಮಾಡಿ ಆ ಮಗುವಿನ ತಲೆಯ ಸ್ಥಾನದಲ್ಲಿ ಕೂಡಿಸಿದರು. ಶಂಕರನ ದಯೆಯಿಂದ ಆ ಹುಡುಗನು ಪುನಃ ಉಜ್ಜೀವಿತವಾಗಿ ಚೈತನ್ಯ ಶಕ್ತಿಯಿಂದ ಪೂರ್ಣನಾಗಿ ಅತ್ಯಂತ ಸುಂದರನಾಗಿ ಶೋಭಿಸಿದನು. ಆಗ ಎಲ್ಲಾ ದೇವತೆಗಳು, ಬ್ರಹ್ಮದೇವರು ಕೂಡಿ ಆ ಗಜಮುಖನನ್ನು ಗಣಾಧ್ಯಕ್ಷ ಸ್ಥಾನದಲ್ಲಿ ಅಭಿಷೇಕ ಮಾಡಿದರು.” ಪಾವರ್ತಿಯು ಆನಂದದಿಂದ ಅವನ ತಲೆಯ ಮೇಲೆ ಕೈಯಿಟ್ಟು “ಪುತ್ರೋಯಮಿಯೇ ಪರಃ” ಇವನು ಸ್ಕಂದನ ನಂತರ ನನ್ನ ಎರಡನೇಯ ಪುತ್ರನು ಎಂದು ಪ್ರೀತಿಯಿಂದ ನುಡಿದಳು.

**ಶಿವಪುರಾಣದ ದಂತಕಥೆ ಸಾರಾಂಶ :**

ಶಿವಪುರಾಣದಲ್ಲಿ ಹೇಳಿರುವಂತೆ ಗಣಪತಿಯನ್ನು ತುಳಸೀ ದಳದಲ್ಲಿ ಪೂಜಿಸಬಾರದು. ಏಕೆಂದರೆ ತುಳಸಿಯ ದರ್ಶನ ಮತ್ತು ಗಂಧಗಳು ಗಣೇಶ ದೇವರಿಗೆ ಸಂಬಂಧಪಟ್ಟ ಒಳಕೇಂದ್ರಗಳನ್ನು ಮುಚ್ಚುತ್ತವೆ. ಕೇತಕೀ ಪುಷ್ಪದ ಸ್ಪರ್ಶವು ಶಿವನ ದರ್ಶನಕ್ಕೆ ಸಂಬಂಧಪಟ್ಟ ಕೇಂದ್ರಗಳ ಪ್ರಭಾವವನ್ನು ಕಡಿಮೆ ಮಾಡುತ್ತದೆ. ಹಾಗೆಯೇ ಚೌತಿಯ ಚಂದ್ರನ ದರ್ಶನವೂ ಗಣೇಶನ ಉಪಾಸನೆಗೆ ಪ್ರತಿಬಂಧಕವಾಗಿದೆ.


ಸೂರ್ಯನು ಬುದ್ಧಿತತ್ವಕ್ಕೆ ಮತ್ತು ಚಂದ್ರನು ಮನಸ್ತತ್ವಕ್ಕೆ ದೇವತೆ. ಗಣೇಶನ ಆಳ್ವಿಕೆಗೆ ಒಳಪಟ್ಟಿರುವ ಇಪ್ಪತ್ತೊಂದು ತತ್ವಗಳಲ್ಲಿ ಕೊನೆಯದು ಮನಸ್ಸು. ಉಳಿದ ಇಪ್ಪತ್ತು ತತ್ವಗಳಾವುವೆಂದರೆ, ಪಂಚಭೂತಗಳು, ಪಂಚ ಕರ್ಮೇಂದ್ರಿಯಗಳು, ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚತನ್ಮಾತ್ರೆಗಳು. ಮನಸ್ಸನ್ನು ಸಂಯಮದಿಂದ ಒಳಗಿನ ಜ್ಞಾನಾಕಾಶದಲ್ಲಿ ಲಯಗೊಳಿಸಿದರೆ ಗಣೇಶನ ಮಹಿಮೆಯ ಅನುಭವ ಉಂಟಾಗುತ್ತದೆ.

ಗಣೇಶ ಚತುರ್ಥಿಯ ರಾತ್ರಿ ಇಂತಹ ಸಂಯಮದಲ್ಲಿದ್ದು ಭಗವಂತನ ನಿಜಸ್ವರೂಪವನ್ನು ಅನುಭವಿಸುತ್ತಾ ಆನಂದವಾಗಿರಬೇಕು. ಹಾಗೆ ಮಾಡದೇ ಅದನ್ನು ಹೊರಗಿನ ಆಕಾಶದಲ್ಲಿ ಕಾಣುವ ಚಂದ್ರರೂಪದಲ್ಲಿ ನೋಡುವುದರಲ್ಲಿ ಆಸಕ್ತಿ ಹೊಂದಿದರೆ, ಗಣೇಶನ ಅಪಾರಶಕ್ತಿಯು ನಮ್ಮನ್ನ ರಕ್ಷಿಸುವುದರೊಂದಿಗೆ ಹಲವು ಪರಾಕಾಷ್ಠೆಗಳನ್ನು ಆಸ್ವಾದಿಸುತ್ತದೆ.

**ಗೌರಿ ವ್ರತ ಆಚರಣೆ :**

ಗೌರಿ ಹಬ್ಬ ಕನ್ನಡ ನಾಡಿನ ದೊಡ್ಡ ಹಬ್ಬ. ಭಾದ್ರಪದ ತದಿಗೆಯಂದು ಗೌರಿ ಹಬ್ಬ ಆಚರಿಸಲಾಗುತ್ತದೆ. ಇದು ಮುತ್ತೈದೆಯರಿಗೆಲ್ಲಾ ಸೌಭಾಗ್ಯ ನೀಡುವ ಹಬ್ಬ ಎಂಬ ನಂಬಿಕೆ. ಒಮ್ಮೆ ಬಹಳ ಬರಗಾಲ ಬಂದು ಕೆರೆ ಕೊಳ್ಳಗಳೆಲ್ಲ ವರ್ಷಗಟ್ಟಲೆ ಬತ್ತಿ ಆಕಾರ ಎದ್ದೇಳುತ್ತದೆ. ಜನ ದನಗಳಿಗೆ ಕುಡಿವ ನೀರು ಕೂಡ ಇಲ್ಲದೇ ಕಂಗಾಲಾಗುತ್ತಾರೆ. ಬುಡಬುಡಿಕೆಯವನೊಬ್ಬ "ಮುತ್ತೈದೆಯೊಬ್ಬಳನ್ನು ಕೆರೆಗೆ ಹಾರ (ಬಲಿ) ಕೊಡುವುದಾದರೆ ಕೆರೆ ತುಂಬುವಷ್ಟು ಮಳೆಯಾಗುತ್ತದೆ" ಎಂದು ಹೇಳಿ ಹೋಗುತ್ತಾನೆ. ಆಗ ಊರ ಗೌಡನಿಗೆ ಚಿಂತೆ ಆಗುತ್ತದೆ. ಯಾರು ಇದಕ್ಕೆ ಒಪ್ಪುತ್ತಾರೆ ಎಂದು.ಆಗ ಅವನ ಹಿರಿ ಸೊಸೆ 'ಗೌರಿ' ಮುಂದೆ ಬಂದು "ಮಳೆ ಬಂದು ಕೆರೆ ತುಂಬಿದಲ್ಲಿ ಮುತ್ತೈದೆಯನ್ನು ಬಲಿ ಕೊಡುವುದಾಗಿ ಹರಕೆ ಹೊತ್ತುಕೊಳ್ಳಿ. ಕೆರೆ ತುಂಬಿದಲ್ಲಿ ತಾನು ಆ ಹರಕೆಯನ್ನು ನೆರವೇರಿಸುತ್ತೇನೆ" ಎಂದು ಹೇಳುತ್ತಾಳೆ. ಅದರಂತೆಯೇ ಗೌಡನು ಹರಕೆ ಹೊತ್ತುಕೊಳ್ಳುತ್ತಾನೆ. ಕಾಕತಾಳೀಯವೋ ಎಂಬಂತೆ ಅದೇ ವರ್ಷ ತುಂಬಾ ಮಳೆ ಸುರಿದು ಕೆರೆ ಕೊಳ್ಳಗಳೆಲ್ಲ ತುಂಬಿ ತುಳುಕುತ್ತವೆ.ಮಾವನಿಗೆ ಕೊಟ್ಟ ಮಾತಿನಂತೆ ಗೌರಿ ಆ ಕೆರೆಗೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾಳೆ. ಅವಳ ತಂಗಿ 'ಗಂಗೆ' (ಕಿರಿ ಸೊಸೆ) ಕೂಡ ಮರುದಿನ ಅಕ್ಕನ ಅಗಲಿಕೆಯ ನೋವು ತಾಳಲಾಗದೆ ತಾನೂ ಕೆರೆಗೆ ಹಾರವಾಗುತ್ತಾಳೆ. ಈ ಗೌರಿಯನ್ನು ನೆನಪಿಸಿಕೊಂಡು ಆ ಕೆರೆಯಿಂದ ಒಂದು ತಂಬಿಗೆ ನೀರನ್ನು ತಂದು ಪೂಜಿಸಿ ಮತ್ತೆ ಅದೇ ಕೆರೆಗೆ ಬಿಡುವ ಆಚರಣೆ ಜಾರಿಗೆ ಬಂದಿರಬಹುದು. ಮಲೆನಾಡಿನ ಕೆಲವೆಡೆ ಗೌರಿಯನ್ನು ಬಿಟ್ಟ ಬಳಿಕ ಗಂಗೆಯನ್ನೂ ತಂದು ಪೂಜಿಸುವ ಆಚರಣೆ ಇದೆ.

ಒಟ್ಟಾರೆಯಾಗಿ ಗಣೇಶ ಚತುರ್ಥಿ ಮತ್ತು ಗೌರಿ ಆಚರಣೆ ದೇಶದ ಪ್ರಥಮ ಪೂಜಿತ ಆರಾಧಿಕನಿಗೆ ವಿವಿಧ ರೂಪದಲ್ಲಿ ಸಂಭ್ರಮದಿಂದ ಆಚರಿಸಿ ಭಕ್ತಿಯ ಪರಾಕಾಷ್ಟೆಯನ್ನು ಹೊರಸೂಸುತ್ತಾರೆ. ವಿಘ್ನ ವಿನಾಶಕನಿಗೆ ವಿಶಿಷ್ಟ ರೀತಿಯ ಆಚರಣೆ ಈ ತರಹದ ಭಕ್ತಿಯ ಸಾರಾಂಶವನ್ನು ತೆರೆದಿಟ್ಟುಕೊಳ್ಳುತ್ತದೆ. ನಾಡಿನ ಸಮಸ್ತ ಜನತೆಗೆ ಗೌರಿ ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.



ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)

## ಅಭಿನಂದನೆಗಳು

ಬೆಂಗಳೂರು ಬಂಟರ ಸಂಘದ ಮಾಜಿ ಉಪಾಧ್ಯಕ್ಷರಾದ **ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)** ಯವರು ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಬೆಂಗಳೂರು ನಗರ ಜಿಲ್ಲೆಯ ನೂತನ ಚೇರ್‌ಮನ್ ಆಗಿ ಮುಂದಿನ ಮೂರು ವರ್ಷದ ಅವಧಿಗೆ ಆಯ್ಕೆಯಾಗಿದ್ದಾರೆ.

ಬೆಂಗಳೂರು ಬಂಟರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸರ್ವ ಸದಸ್ಯರ ಪರವಾಗಿ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.

# ಬಂಟರ ಸಂಘ ಬೆಂಗಳೂರು
## ಕ್ರೀಡಾ ವಿಭಾಗ

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ – 2024–25

ಆತ್ಮೀಯ ಸದಸ್ಯರೇ,

2024–25ನೇ ಸಾಲಿನ 'ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ'ಕ್ಕೆ ತಮ್ಮೆಲ್ಲರನ್ನೂ ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇವೆ. ಸದಸ್ಯರೆಲ್ಲರೂ ಕ್ರೀಡಾ ಮನೋಭಾವದಿಂದ ತಮ್ಮ ಕುಟುಂಬ ಸದಸ್ಯರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತಿದ್ದೇವೆ. ವಾರ್ಷಿಕ ಕ್ರೀಡಾಕೂಟದ ಅಂಗವಾಗಿ, ಈ ಸಂಚಿಕೆಯಲ್ಲಿ ಮೊದಲಿಗೆ ಅಥ್ಲೆಟಿಕ್ ಕ್ರೀಡಾಕೂಟದ ವಿವರವನ್ನು ಪ್ರಕಟಿಸಿದ್ದು, ಉಳಿದ ಕ್ರೀಡೆಯ ವಿವರ ಮತ್ತು ವೇಳಾಪಟ್ಟಿಯನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

## ಕ್ರೀಡಾಕೂಟದ ವಿವರ

### ಅಥ್ಲೆಟಿಕ್ಸ್

ಸ್ಥಳ : ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II, ಯಲಚಗುಪ್ಪೆ
ದಿನಾಂಕ : 20.10.2024, ಭಾನುವಾರ ಬೆಳಿಗ್ಗೆ 8.00ಕ್ಕೆ
ಪ್ರವೇಶ ಶುಲ್ಕ : ರೂ. 50/– ಪ್ರತಿ ಸ್ಪರ್ಧೆಗೆ

| ವಯೋಮಿತಿ | ವಯೋಮಿತಿ |
|---|---|
| **6 ವರ್ಷದಿಂದ ಕೆಳಗಿನವರಿಗೆ** (ಪ್ರವೇಶ ಶುಲ್ಕ ಇರುವುದಿಲ್ಲ) : 50 ಮೀಟರ್ ಓಟ<br>ಕಪ್ಪೆ ಜಿಗಿತ(Frog Jump)<br>ಚಾಕೋಲೇಟ್ ಸಂಗ್ರಹ | **36 ರಿಂದ 47 ವರ್ಷ (ಮಹಿಳೆಯರಿಗೆ )** : 400 ಮೀಟರ್ ಓಟ<br>ಲೆಮನ್ ಮತ್ತು ಸ್ಪೂನ್ ಸ್ಪರ್ಧೆ<br>ಗುಂಡು ಎಸೆತ (Shot Put) |
| **6 ರಿಂದ 12 ವರ್ಷ** (ಪ್ರವೇಶ ಶುಲ್ಕ ಇರುವುದಿಲ್ಲ) : 100 ಮೀಟರ್ ಓಟ<br>50 ಮೀಟರ್ ಓಟ<br>ಪೊಟ್ಯಾಟೋ ಓಟ | |
| **12 ರಿಂದ 18 ವರ್ಷ** : 100 ಮೀಟರ್ ಓಟ<br>ಉದ್ದ ಜಿಗಿತ (Long Jump)<br>400 ಮೀಟರ್ ಓಟ<br>ಗುಂಡು ಎಸೆತ (Shot Put) | **47 ರಿಂದ 60 ವರ್ಷ (ಪುರುಷರಿಗೆ)** : 400 ಮೀಟರ್ ಓಟ<br>ಗುಂಡು ಎಸೆತ (Shot Put)<br>**ಮಹಿಳೆಯರಿಗೆ** : 400 ಮೀಟರ್ ಓಟ<br>'ಬಾಲ್‌ತ್ರೋ' ಲೆಮನ್ ಮತ್ತು ಸ್ಪೂನ್ ಸ್ಪರ್ಧೆ |
| **18 ರಿಂದ 26 ವರ್ಷ** : 100 ಮೀಟರ್ ಓಟ<br>400 ಮೀಟರ್ ಓಟ<br>ಗುಂಡು ಎಸೆತ (Shot Put)<br>ಉದ್ದ ಜಿಗಿತ (Long Jump) | **60ವರ್ಷ ಮೇಲಿನವರಿಗೆ** : 400 ಮೀಟರ್ ಓಟ / ನಡಿಗೆ<br>(ಪ್ರವೇಶ ಶುಲ್ಕ ಇರುವುದಿಲ್ಲ)<br>**(ಪುರುಷರಿಗೆ)** 'ಬಾಲ್‌ತ್ರೋ'<br>**ಮಹಿಳೆಯರಿಗೆ** : 400 ಮೀಟರ್ ಓಟ<br>'ಬಾಲ್‌ತ್ರೋ' |

| ವಯೋಮಿತಿ | ವಯೋಮಿತಿ |
|---|---|
| **26 ರಿಂದ 36 ವರ್ಷ** : 100 ಮೀಟರ್ ಓಟ<br>400 ಮೀಟರ್ ಓಟ<br>ಗುಂಡು ಎಸೆತ (Shot Put)<br>ಉದ್ದ ಜಿಗಿತ (Long Jump) | 4 x 100 ಮೀಟರ್ ರಿಲೇ :<br>**ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ**<br>18 ವರ್ಷ ವಯೋಮಿತಿ ಒಳಗಿನವರಿಗೆ ಮತ್ತು ಮೇಲ್ಪಟ್ಟವರಿಗೆ ಪ್ರತ್ಯೇಕ ಸ್ಪರ್ಧೆಯಿರುತ್ತದೆ. |
| **36 ರಿಂದ 47 ವರ್ಷ** (ಪುರುಷರಿಗೆ) : 100 ಮೀಟರ್ ಓಟ<br>400 ಮೀಟರ್ ಓಟ<br>ಗುಂಡು ಎಸೆತ (Shot Put) | ಹಗ್ಗ ಜಗ್ಗಾಟ (Tug of War) : ಮಹಿಳೆಯರಿಗೆ ಹಾಗೂ ಪುರುಷರಿಗೆ 16 ವರ್ಷ ವಯೋಮಿತಿ ಒಳಗಿನವರಿಗೆ ಮತ್ತು ಮೇಲ್ಪಟ್ಟವರಿಗೆ ಪ್ರತ್ಯೇಕ ಸ್ಪರ್ಧೆಯಿರುತ್ತದೆ. |
| | Fun Games : ಎಲ್ಲಾ ವಯೋಮಿತಿ (ಸಮಯವಿದ್ದರೆ ಮಾತ್ರ) |

**ವಿ.ಸೂ. : –**

- **ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯವಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ನೀಡತಕ್ಕದ್ದು. ಸಮಾಜ ಬಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.**

**ಸೂಚನೆ:**

1. ಎಲ್ಲಾ ಸ್ಪರ್ಧಿಗಳೂ, ಸ್ಪರ್ಧೆಗೆ ಒಂದು ಗಂಟೆ ಮುಂಚಿತವಾಗಿ ಸ್ಥಳದಲ್ಲಿ ಹಾಜರಿದ್ದು, ಶುಲ್ಕ ನೀಡಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು.
2. ಸ್ಪರ್ಧಾಳುಗಳು ತಮ್ಮ ವಯೋಮಿತಿಗೆ ಅನುಗುಣವಾಗಿ ಭಾಗವಹಿಸಬೇಕು. ಅಗತ್ಯವಿದ್ದಲ್ಲಿ ಪ್ರಮಾಣ ಪತ್ರದ / ದಾಖಲೆಯ ದಿನಾಂಕ ಪ್ರತಿಯನ್ನು ತೋರಿಸತಕ್ಕದ್ದು.
3. ಪ್ರತಿಯೊಂದು ಸ್ಪರ್ಧೆಗೂ ಕನಿಷ್ಠ 4 ಸ್ಪರ್ಧಿಗಳು ಇರಲೇಬೇಕು.
4. ಎಲ್ಲಾ ವಯೋಮಿತಿಯಲ್ಲೂ ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆಯಿರುತ್ತದೆ.
5. 12 ವರ್ಷ ವಯೋಮಿತಿಯ ಕೆಳಗೆ ಹಾಗೂ 60 ವರ್ಷ ಮೇಲ್ಪಟ್ಟವರಿಗೆ ಪ್ರವೇಶ ಶುಲ್ಕ ಇರುವುದಿಲ್ಲ.
6. ಎಲ್ಲಾ ಕ್ರೀಡೆಗಳಿಗೂ ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ.

**ವಿಜಯ್ ಜೆ. ಶೆಟ್ಟಿ ಹಾಲಾಡಿ**
**ಗೌರವ ಕಾರ್ಯದರ್ಶಿ**

**ಸಿಎ. ಅಶೋಕ್ ಶೆಟ್ಟಿ ಎಂ.**
**ಅಧ್ಯಕ್ಷರು**

**ಸಬನ್ ಶೆಟ್ಟಿ ಗುಡಿಬೆಟ್ಟು**
ಸಂಚಾಲಕರು, ಕ್ರೀಡಾ ಸಮಿತಿ
ಮೊ: 9740923868

**ಸುರೇಂದ್ರ ಶೆಟ್ಟಿ ಹಡಾಳಿ**
ಚೇರ್‌ಪರ್ಸನ್, ಕ್ರೀಡಾ ಸಮಿತಿ
ಮೊ: 9620386172

**ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಸಮಿತಿಯ ಚೇರ್‌ಪರ್ಸನ್ ಮತ್ತು ಸಂಚಾಲಕರನ್ನು ಸಂಪರ್ಕಿಸಬಹುದು.**

# ಅಭಿನಂದನೆಗಳು



**ಶ್ರೀ ಕೀರ್ತನ್ ಎನ್. ಶೆಟ್ಟಿ**

ಬೈಂದೂರು ತಾಲೂಕು ಮೂರೂರು ಕಲ್ಲಗದ್ದೆಮನೆ ಶ್ರೀಯುತ ದಿ. ನಾಗರಾಜ ಶೆಟ್ಟಿ ಮತ್ತು ಕುದ್ರುಕೋಡು ನಡುಮನೆ ಶ್ರೀಮತಿ ಸುಶೀಲಾ ಎನ್. ಶೆಟ್ಟಿಯವರ ಮಗನಾದ ಬೆಂಗಳೂರು ಬಂಟರ ಸಂಘದ ಸದಸ್ಯರೇ ಆದ ಶ್ರೀ ಕೀರ್ತನ್ ಎನ್. ಶೆಟ್ಟಿಯವರು 2024ನೇ ಸಾಲಿನ ಸಿಎ. ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ.

ಬೆಂಗಳೂರು ಬಂಟರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸರ್ವ ಸದಸ್ಯರ ಪರವಾಗಿ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.

# BUNTS' SANGHA RNS VIDYANIKETAN - I AND COMPOSITE PU COLLEGE INDEPENDENCE DAY REPORT

***Patriotism is not a badge that you should carry on your shoulder. You should carry it in your heart and let your actions speaks for it.***

Bunts' Sangha RNS Vidyaniketan and Composite PU College has celebrated the 78th Independence Day with zeal and pride. Col. Sham Sunder, Chief Consultant, Niketan Consultants, Bengaluru was the Chief Guest and Dr. Karunakar Rai B, Member, Executive Council, Visvesvaraya Technological University, Belagavi was the Guest speaker of the occasion. The Guests and the members of school managementwere ceremonially escorted by the School Head Boy and Head Girl which was followed by the Flag Hoisting with the unison chorus of National Anthem. The Guests received the honour of salute through the spectacular March Past by the students.The early morning warmth was touched by the patriotic fervour.

The Principal Mrs. Usha Santhosh formally welcomed the gathering. The chiefguest Col. Sham Sunderdelivered an inspiring speech. He defined the meaning of freedom in real sense as freedom with responsibilities and urged the students to cultivate the values upheld by the selfless freedom fighters. He also inspired the audience to contribute in their individual capacities to the progress of India by administering the Oath.






The Guest speaker Dr. Karunakar Rai B congratulated the students for their discipline and told that country will be the best in the hands of responsible future generation to bring back the historical glory of ancient India. He motivated the students by his thought-provoking speech and insisted them to be responsible citizens by remembering the sacrifice and guidance of the people who helped them in their life.

The Secretory of Bunts'Sangha, Bangalore, Sri Vijay J Shetty Halady, delivered an inspiring address and recalled his childhood memories of Independence day. In his presidential address Shri. CA Ashok Shetty M, President, Bunts' Sangha, Bengaluru, exhorted the need of Vasudaiva Kutumbakam and advised the students to uphold the essence of freedom.

The guests were felicitated by the school management and meritorious students have been awarded.






Meaningful Musical Medley substantiated the importance of the day. A scintillating and colourful dance drama was presented on the theme of 'Significance of Tri-Colour'. The entire quadrangle was waved with tri-color as a mark of true patriotism and applause for the breath -taking performance by the students.

The celebration was concluded with the words of gratitude and sweets were distributed to all the students and staff members.

---

# ಬಂಟರ ಸಂಘ ಬೆಂಗಳೂರು
## ವಿವಾಹ ವೇದಿಕೆ ಸಮಿತಿ 2024–26

**ಗೌರವಾನ್ವಿತ ಸದಸ್ಯರುಗಳೇ,**

ವಿವಾಹ ವೇದಿಕೆ ಸಮಿತಿಯ ಅಡಿಯಲ್ಲಿ ನಾವು ಪ್ರತೀ ಶನಿವಾರ ಮಧ್ಯಾಹ್ನ 3.00 ರಿಂದ ಸಂಜೆ 5.00ರವರೆಗೆ ನಮಗೆ ಬಂದಿರುವ ವಧು ವರರ ಪ್ರೊಫೈಲ್ ಗಳನ್ನು ಪೋಷಕರಿಗೆ ನೋಡುವ ಅವಕಾಶವನ್ನು ಕಲ್ಪಿಸಿದ್ದೇವೆ. ಅವರಿಗೆ ಅನುಕೂಲವಾಗುವಂತೆ ಪ್ರೊಫೈಲ್‌ಗಳನ್ನು ಪ್ರೊಫೆಷನ್ ವೈಸ್ ಮತ್ತು ಏಜ್ ವೈಸ್ ವಿಂಗಡಣೆ ಮಾಡಿದ್ದೇವೆ.

ಈ ವೇದಿಕೆಯ ಅಡಿಯಲ್ಲಿ ನೂತನವಾಗಿ ನಾವು ಮಾಡಬೇಕೆಂದು ತೀರ್ಮಾನಿಸಿದ ಈ ಕೆಳಗಿನ ಕಾರ್ಯಕ್ರಮಗಳನ್ನು ತಮ್ಮ ಮುಂದೆ ಇಡುತ್ತಾ, ತಮ್ಮ ಅಮೂಲ್ಯವಾದ ಸಲಹೆ ಹಾಗೂ ಸಹಕಾರವನ್ನು ಕೋರುತ್ತಿದ್ದೇವೆ.

1. ಹಿಂದಿನ ಸಮಿತಿಯವರು ನಡೆದುಕೊಂಡಂತೆ, ಪ್ರತೀ ಶನಿವಾರ ಮಧ್ಯಾಹ್ನ 3 ರಿಂದ 5 ಘಂಟೆಯವರೆಗೆ ವಧು–ವರರ ಅನ್ವೇಷಣೆ ಕಾರ್ಯಕ್ರಮ ಇರುತ್ತದೆ.
2. ಪ್ರತೀ ತಿಂಗಳ 3ನೇ ಶನಿವಾರದಂದು ಮಧ್ಯಾಹ್ನ 3 ರಿಂದ 5 ಘಂಟೆಯವರೆಗೆ ಕೌಟುಂಬಿಕ ಸಮಾಲೋಚನೆ (Councelling) ಕಾರ್ಯಕ್ರಮ ಇರುತ್ತದೆ.

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿ.ಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಸೇವಂತಿ ಶೆಟ್ಟಿ**
ಸಂಚಾಲಕರು, ವಿವಾಹ ವೇದಿಕೆ ವಿಭಾಗ

**ಗೀತಾ ಶೆಟ್ಟಿ**
ಚೇರ್ ಪರ್ಸನ್, ವಿವಾಹ ವೇದಿಕೆ ವಿಭಾಗ
ಮೊ: 99457 36982

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ವಿವಾಹ ವೇದಿಕೆ ವಿಭಾಗದ ಸದಸ್ಯರು**

**ಹೆಚ್ಚಿನ ಮಾಹಿತಿಗಾಗಿ ಮತ್ತು ತಾವೇನಾದರೂ ನೂತನ ಸಲಹೆ/ ಸೂಚನೆಗಳನ್ನು ನೀಡಬೇಕೆಂದು ಇಚ್ಛಿಸಿದಲ್ಲಿ ವಿವಾಹ ವೇದಿಕೆ ಸಮಿತಿಯ ಚೇರ್‌ಪರ್ಸನ್‌ರನ್ನು ಸಂಪರ್ಕಿಸಬಹುದಾಗಿದೆ.**

# ಸ್ವಾತಂತ್ರ್ಯ ದಿನಾಚರಣೆಯ ವರದಿ
# ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ –II ಮತ್ತು ಪದವಿಪೂರ್ವ ಕಾಲೇಜು



ಸ್ವಾತಂತ್ರ್ಯ ಹೋರಾಟಗಾರರ ಶ್ರಮ, ತ್ಯಾಗ ಮತ್ತು ಬಲಿದಾನಗಳ ಸ್ಮರಣೆಯ ಸಲುವಾಗಿ 78ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ್ – 2 ಆವರಣದಲ್ಲಿ ಹರ್ಷೋಲ್ಲಾಸದಿಂದ ಆಚರಿಸಲಾಯಿತು.



ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಭಾರತೀಯ ವಾಯುಸೇನೆಯ ನಿವೃತ್ತ ಸಾರ್ಜೆಂಟ್. ಕರುಂಬಯ್ಯ ಸಿ.ಎ, ಮತ್ತು ಶ್ರೀ. ರಾಘವೇಂದ್ರ ಕುಲಕರ್ಣಿಯವರು ಉಪಸ್ಥಿತರಿದ್ದರು. ವಿಶೇಷ ಆಹ್ವಾನಿತರಾಗಿ ಬಂಟ್ಸ್ ಸಂಘದ ಉಪಾಧ್ಯಕ್ಷರಾದ ಶ್ರೀ. ಸಂತೋಷ್ ಶೆಟ್ಟಿ. ಜೆ, ಮಹಿಳಾ ಉಪಾಧ್ಯಕ್ಷರಾದ ಶ್ರೀಮತಿ. ಕಾಂತಿ ಶೆಟ್ಟಿ, ಜಂಟಿ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಶೆಟ್ಟಿಯವರು ವೇದಿಕೆಯಲ್ಲಿದ್ದರು. ಕಾರ್ಯಕ್ರಮದ ರೂವಾರಿಯಾದ ಬಂಟ್ಸ್ ಸಂಘ ಕಾಲೇಜಿನ ಪ್ರಾಂಶುಪಾಲರು ಸ್ವಾಗತನುಡಿಯನ್ನು ಮತ್ತು ಶಾಲೆಯ ಮುಖ್ಯೋಪಾಧ್ಯಾಯರು ವಂದನಾರ್ಪಣೆಯನ್ನು ನೆರವೇರಿಸಿಕೊಟ್ಟರು. ಸಂಪೂರ್ಣ ಕಾರ್ಯಕ್ರಮದ ನಿರೂಪಣೆಯನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರಾದ ಶರ್ಮಿಲಿ ಹಾಗೂ ಸವಿತಾ ವಿ ಸಾಗರ್ ನಡೆಸಿಕೊಟ್ಟರು.




ಪಥಸಂಚಲನದ ಮೂಲಕ ಆಗಮಿತ ಅತಿಥಿಗಣ್ಯರನ್ನು ಬರಮಾಡಿಕೊಳ್ಳುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು. ಧ್ವಜಾರೋಹಣ ಕಾರ್ಯಕ್ರಮವು ಬೆಳಗ್ಗೆ 7.30ಕ್ಕೆ ಸರಿಯಾಗಿ ನೆರವೇರಿತು. ಅತಿಥಿಗಣ್ಯರು ಪಥಸಂಚಲನ ವಂದನೆಯನ್ನು ಸ್ವೀಕರಿಸಿದರು. ಮುಂದುವರಿದಂತೆ ನೃತ್ಯ, ನಾಟಕ, ಗೀತಗಾಯನ, ಯೋಗ ಮತ್ತು ಕರಾಟೆ ಕಸರತ್ತುಗಳ ಪ್ರದರ್ಶನ ನೋಡುಗರ ಮನಸೆಳೆಯಿತು.



ಕಾರ್ಯಕ್ರಮದ ಕೊನೆಯ ಘಟ್ಟದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರು ಎಲ್ಲರೂ ಕೈಗೂಡಿಸಿ ತಲೆದೂಗಿದ "ವಂದೇ ಮಾತರಂ" ಹಾಡಿನ ಪ್ರದರ್ಶನವು ಸ್ವಾತಂತ್ರ್ಯ ದಿನಾಚರಣೆಯ ಆಶಯವನ್ನು ಸಾರ್ಥಕಗೊಳಿಸಿದಂತಿತ್ತು. ಸ್ವಾತಂತ್ರ್ಯದ ಸಿಹಿ ಹಂಚಿಕೆಯೊಂದಿಗೆ ಸ್ವಾತಂತ್ರ್ಯದ ಜವಾಬ್ದಾರಿಯನ್ನು ಉನ್ನತವಾಗಿ ನಿಭಾಯಿಸುವ ಆಶಯದೊಂದಿಗೆ ಕಾರ್ಯಕ್ರಮಕ್ಕೆ ತೆರೆಯೆಳೆಯಲಾಯಿತು.

# ಸಾವಿರಾರು ಮರಗಳ ತಾಯಿ – ಸಾಲು ಮರದ ತಿಮ್ಮಕ್ಕ



ಪ್ರಸಾದ್ ಶೆಟ್ಟಿ,
ಸೀತಾನದಿ

ಸಾಲು ಸಾಲು ಸಸಿಗಳ ನೆಟ್ಟು, ನೀರುಣಿಸಿ, ಪೋಷಿಸಿ, ಪೊರೆದು, ಸಾವಿರಾರು ಮರಗಳಿಗೆ ತಾಯಿಯಾದ ಸಾಲುಮರದ ತಿಮ್ಮಕ್ಕನ ಯಶೋಗಾಥೆ ಇದು.


ಜೂನ್ 5 ವಿಶ್ವ ಪರಿಸರ ದಿನಾಚರಣೆ ಪರಿಸರ ಎಂದರೆ ಈ ನೆಲದಲ್ಲಿ ತಕ್ಷಣ ನೆನೆಪಾಗುವ ಹೆಸರು ಸಾಲು ಮರದ ತಿಮ್ಮಕ್ಕ. ವೃಕ್ಷಮಾತೆ ಎಂದು ಸಹ ಇವರನ್ನು ಕರೆಯುತ್ತಾರೆ.

ಸುಮಾರು ವರ್ಷಗಳ ಹಿಂದೆ ನೂರಾರು ಸಸಿಗಳನ್ನು ನೆಟ್ಟು ಪರಿಸರಕ್ಕೆ ಕೊಡುಗೆ ನೀಡಿರುವ ತಿಮ್ಮಕ್ಕ, ತಾವು ನೆಟ್ಟ ಸಾಲು ಸಸಿಗಳಿಂದಲೇ "ಸಾಲು ಮರದ ತಿಮ್ಮಕ್ಕ" ಎಂಬ ಹೆಸರು ಪಡೆದುಕೊಂಡರು. ಪರಿಸರಕ್ಕೆ ಸಾಲುಮರದ ತಿಮ್ಮಕ್ಕ ನೀಡಿರುವ ಕೊಡುಗೆಯ ಬಗ್ಗೆ ತಿಳಿದು ಅದೆಷ್ಟೋ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳ ಅವರನ್ನು ಗೌರವಿಸಿದೆ.

ಮರಗಳನ್ನು ಬೆಳೆಸುವುದು ದೊಡ್ಡ ವಿಷಯವಲ್ಲ ಎಂದು ನಾವು ಇಂದು ಭಾವಿಸಬಹುದು. ಆದರೆ ಅವರು ಅದನ್ನು ಸ್ವಂತವಾಗಿ ಮಾಡಿದಾಗ ಮಾತ್ರ ಅದರ ನೈಜತೆ ತಿಳಿಯುತ್ತದೆ. ತಿಮ್ಮಕ್ಕ ಮತ್ತು ಅವರ ಪತಿ ಸಸಿಗಳಿಗೆ ನೀರುಣಿಸಲು ನಾಲ್ಕು ಕಿ. ಮೀ. ದೂರದವರೆಗೆ ಬಿಂದಿಗೆ ನೀರಿನೊಂದಿಗೆ ನಡೆದು ಸಾಗಿ ಗಿಡಗಳ ಪೋಷಿಸಿದರು.

ತಿಮ್ಮಕ್ಕ ಮತ್ತು ಅವರ ಪತಿ ಇಬ್ಬರೂ ಮೊದಲ ವರ್ಷದಲ್ಲಿ 4 ಕಿಲೋಮೀಟರ್ ಉದ್ದಕ್ಕೂ ರಸ್ತೆಯ ಎರಡೂ ಬದಿಗಳಲ್ಲಿ 10 ಆಲದ ಸಸಿಗಳನ್ನು ನೆಡುವುದರ ಮೂಲಕ ಪ್ರಾರಂಭಿಸಿದರು. ತಮ್ಮ ಮಕ್ಕಳಂತೆ ಗಿಡಗಳನ್ನು ಆರೈಕೆ ಮಾಡಿದರು. ಪ್ರತೀ ವರ್ಷ ಈ ಮರಗಳ ಸಂಖ್ಯೆ ಹೆಚ್ಚುತ್ತಲೇ ಇತ್ತು. ಇಲ್ಲಿಯವರೆಗೆ ಅವರು ಮತ್ತು ಅವರ ಪತಿಯಿಂದ 8000 ಕ್ಕೂ ಹೆಚ್ಚು ಮರಗಳನ್ನು ಬೆಳೆಸಿದ್ದಾರೆ ಎಂದರೆ ಇದು ಸುಲಭದ ಕೆಲಸವಲ್ಲ ಬಿಡಿ.

**ಹುಟ್ಟು ಮತ್ತು ಜೀವನ:** 1911, ಜುಲೈ 8 ರಂದು ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನಲ್ಲಿ ತಿಮ್ಮಕ್ಕ ಅವರ ಜನನ. ತಂದೆ ಚಿಕ್ಕರಂಗಯ್ಯ, ತಾಯಿ ವಿಜಯಮ್ಮ.



ಶಾಲೆಗೆ ಹೋಗಲು ಮನೆಯಲ್ಲಿ ಅನುಕೂಲಕರ ಪರಿಸ್ಥಿತಿ ಇಲ್ಲದ ಕಾರಣ, ತಿಮ್ಮಕ್ಕ ಮೊದಲು ದನಕರುಗಳನ್ನು ಮೇಯಿಸುತ್ತಿದ್ದರು. ನಂತರ ಹತ್ತಿರದ ಒಂದು ಕಲ್ಲು ಗಣಿಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡಿದರು.

ಇವರು ಚಿಕ್ಕಯ್ಯ ಎಂಬ ಒಬ್ಬ ದನಕಾಯುವವರನ್ನು ಸುಮಾರು 12 ವರ್ಷದ ವಯಸ್ಸಿನಲ್ಲಿ ಮದುವೆಯಾದರು. ಚಿಕ್ಕಯ್ಯ ಅವರು ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಹುಲಿಕಲ್ ಗ್ರಾಮದವರು.

**ಗಿಡಗಳೇ ಮಕ್ಕಳಾದ ಕಥೆ:** ಮದುವೆಯಾಗಿ ಅದೆಷ್ಟೋ ವರ್ಷಗಳಾಗಿ ತಿಮ್ಮಕ್ಕ ಅವರಿಗೆ ಮಕ್ಕಳಾಗಿರಲಿಲ್ಲ. ಹೀಗಾಗಿ ತಿಮ್ಮಕ್ಕ ಮಕ್ಕಳಿಲ್ಲದ ದು:ಖವನ್ನು ಮರೆಯಲು ರಸ್ತೆಯ ಬದಿಗಳಲ್ಲಿ ಆಲದ ಸಸಿಗಳನ್ನು ನೆಡಲು ಆರಂಭಿಸಿದರು.

**ಗಿಡ ನೆಡುವುದೇ ಕಾಯಕ:** ಕುದೂರಿನಿಂದ ಹುಲಿಕಲ್ ತನಕ ಇರುವ ರಾಜ್ಯ ಹೆದ್ದಾರಿ 94ರಲ್ಲಿ ತಿಮ್ಮಕ್ಕರವರು ಆಲದ ಸಸಿಗಳನ್ನು ನೆಟ್ಟರು. ತಿಮ್ಮಕ್ಕ ಅವರ ಹಳ್ಳಿಯ ಬಳಿ ಆಲದ ಮರಗಳು ಹೇರಳವಾಗಿದ್ದವು. ತಿಮ್ಮಕ್ಕ ಮತ್ತು ಅವರ ಪತಿ ಈ ಮರಗಳಿಂದ ಸಸಿಗಳನ್ನು ಕಸಿ ಮಾಡಲು ಆರಂಭಿಸಿದರು. ಮೊದಲ ವರ್ಷದಲ್ಲಿ ಹತ್ತು ಸಸಿಗಳನ್ನು ನೆರೆಯ ಕುದೂರು ಹಳ್ಳಿಯ ಬಳಿ 4 ಕಿ. ಮೀ. ಉದ್ದಳತೆಯಲ್ಲಿ ಸಸಿಗಳನ್ನು ನೆಟ್ಟರು. 2ನೇ ವರ್ಷ 15 ಮತ್ತು ಮೂರನೇ ವರ್ಷ 20 ಸಸಿಗಳನ್ನು ನೆಟ್ಟರು.

ತಿಮ್ಮಕ್ಕ ದಂಪತಿ ಈ ಸಸಿಗಳನ್ನು ನೆಡಲು ತಮ್ಮಲ್ಲಿದ್ದ ಅತ್ಯಲ್ಪ ಆದಾಯವನ್ನೇ ಬಳಸಿದರು. ಗಂಡ– ಹೆಂಡತಿ ಇಬ್ಬರೂ ಸಸಿಗಳಿಗೆ ನೀರುಣಿಸಲು ಬಿಂದಿಗೆ ಕೊಳಗಗಳಲ್ಲಿ 4 ಕಿ. ಮೀ. ವರೆಗೆ ನೀರನ್ನು ಹೊತ್ತು ಕೊಂಡೊಯ್ಯುತ್ತಿದ್ದರು. ಸಸಿಗಳನ್ನು

ಮೇವಿನ ಜಾನುವಾರುಗಳ ಕಾಟದಿಂದ ತಪ್ಪಿಸಲು ಅವುಗಳ ಸುತ್ತ ಮುಳ್ಳು ಪೊದೆಗಳನ್ನು ಹೊದಿಸುತ್ತಿದ್ದರು. ನೀರಿನ ಅಭಾವ ಉಂಟಾಗಿ ಗಿಡಗಳಿಗೆ ತೊಂದರೆಯಾಗುತ್ತದೆ ಎಂದು ಅನಿಸಿದಾಗ, ಮತ್ತೆ ಹೆಚ್ಚಾಗಿ ಮುಂಗಾರು ಮಳೆಯ ಕಾಲದಲ್ಲಿ ಗಿಡವನ್ನು ನೆಡಲು ಶುರು ಮಾಡಿದರು. ತಿಮ್ಮಕ್ಕ ಅವರ ಪತಿ 1991 ರಲ್ಲಿ ಮೃತಪಟ್ಟರು.

ದು:ಖದಿಂದ ಹೊರಬಂದ ತಿಮ್ಮಕ್ಕ ಅವರು ಮತ್ತೆ ಮರಗಳಲ್ಲಿ ಸಾಂತ್ವನವನ್ನು ಕಂಡುಕೊಂಡರು. ಬಳಿಕ ಹೊಸ ಚೈತನ್ಯದಿಂದ ಅವುಗಳನ್ನು ಪೋಷಿಸುವುದನ್ನು ಮತ್ತೆ ಮುಂದುವರೆಸಿದರು.

ಸಾಲು ಮರದ ತಿಮ್ಮಕ್ಕ ಈ ರೀತಿ ತಮ್ಮ ಸ್ವಂತ ಖರ್ಚಿನಲ್ಲಿ 8000 ಸಸಿಗಳನ್ನು ನೆಟ್ಟಿದ್ದಾರೆ. ಇಂದಿಗೆ ಅವುಗಳ ಮೌಲ್ಯವು ಸುಮಾರು 15 ಲಕ್ಷಕ್ಕೂ ಅಧಿಕ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಮರಗಳ ನಿರ್ವಹಣೆಯನ್ನು ಈಗ ಕರ್ನಾಟಕ ಸರಕಾರವು ವಹಿಸಿಕೊಂಡಿದೆ. ತಿಮ್ಮಕ್ಕ ಅನಕ್ಷರಸ್ಥೆಯಾಗಿದ್ದರೂ ಪರಿಸರ ಸಂರಕ್ಷಣೆಯಲ್ಲಿ ಮಹತ್ಕಾರ್ಯ ಮಾಡಿದರು. ಮುಂದಿನ ಪೀಳಿಗೆಯ ಹಿತದೃಷ್ಠಿಯನ್ನು ಗಮನದಲ್ಲಿಟ್ಟುಕೊಂಡು ಮರಗಳಿಗೆ ನೀರುಣಿಸಿ ಬೆಳೆಸಿದರು. ಪರಿಸರ ಸಮಸ್ಯೆಗಳತ್ತಲೂ ಮುಖ ಮಾಡಿದ ತಿಮ್ಮಕ್ಕ ಅವರು ಈ ಕುರಿತ ಹಲವು ಪ್ರತಿಭಟನೆಗಳಲ್ಲೂ ಪಾಲ್ಗೊಂಡಿದ್ದಾರೆ.

**ಮರ ಉಳಿಸಲು ಹೋರಾಟ:** 2019 ರಲ್ಲಿ ಹೆಚ್. ಡಿ. ಕುಮಾರಸ್ವಾಮಿ ಸಿಎಂ ಆಗಿದ್ದಾಗ, ಬಾಗೇಪಲ್ಲಿ – ಹಲಗೂರು ರಸ್ತೆಯಲ್ಲಿ (ಮಂಡ್ಯ ಜಿಲ್ಲೆ) ಹೆದ್ದಾರಿ ಅಗಲೀಕರಣಕ್ಕಾಗಿ ಮರಗಳನ್ನು ಕಡಿಯುವ ಪ್ರಸ್ತಾಪವಿತ್ತು (ಈ ಸ್ಥಳದಲ್ಲಿ ತಿಮ್ಮಕ್ಕ ಮತ್ತು ಅವರ ಪತಿ 385 ಆಲದ ಮರಗಳನ್ನು ನೆಟ್ಟಿದ್ದರು). ಹೆದ್ದಾರಿ ಅಗಲೀಕರಣಕ್ಕೆ ತಿಮ್ಮಕ್ಕ ಅವರು ವಿರೋಧ ವ್ಯಕ್ತಪಡಿಸಿದ್ದರು. ತಿಮ್ಮಕ್ಕ ಅವರ ಒತ್ತಾಯಕ್ಕೆ ಮಣಿದ ಸರಕಾರವು, ಪರ್ಯಾಯ ಮಾರ್ಗಗಳತ್ತ ಮುಖ ಮಾಡಿತು. ಇದರಿಂದ 70 ವರ್ಷಗಳ ಕಾಲ ಸಾಕಿದ್ದ ಮರಗಳ ಜೀವ ಉಳಿದಂತಾಯಿತು.

**ಪ್ರಶಸ್ತಿ ಮತ್ತು ಗೌರವ:** ಪರಿಸರಕ್ಕೆ ತಿಮ್ಮಕ್ಕ ನೀಡಿರುವ ಕೊಡುಗೆಯನ್ನು ಗಮನಿಸಿ ಹಲವಾರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳು ಪುರಸ್ಕರಿಸಿವೆ. ಭಾರತ ಸರ್ಕಾರ 2019 ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಭಾರತದ ರಾಷ್ಟ್ರೀಯ ಪೌರ ಪ್ರಶಸ್ತಿ ನೀಡಿ ಸನ್ಮಾನಿಸಲಾಗಿದೆ. ಭಾರತದ ರಾಷ್ಟ್ರೀಯ ಪೌರ ಪ್ರಶಸ್ತಿ ನೀಡಿ ಸನ್ಮಾನಿಸಲಾಗಿದೆ. ಅಮೇರಿಕ ಸಂಯುಕ್ತ ಸಂಸ್ಥಾನದ ಲಾಸ್ ಏಂಜಲೀಸ್ ಮತ್ತು ಓಕ್ ಲ್ಯಾಂಡ್, ಕ್ಯಾಲಿಫೋರ್ನಿಯಾಗಳಲ್ಲಿ ಪರಿಸರ ಶಿಕ್ಷಣಕ್ಕಾಗಿ ತಿಮ್ಮಕ್ಕರವರ ಸಂಪನ್ಮೂಲಗಳು ಎಂಬ ಪರಿಸರವಾದಿ ಸಂಘಟನೆಗೆ ತಿಮ್ಮಕ್ಕ ಹೆಸರನ್ನು ಇಡಲಾಗಿದೆ.

1995ರಲ್ಲಿ ರಾಷ್ಟ್ರೀಯ ಪೌರ ಪ್ರಶಸ್ತಿ, 1997ರಲ್ಲಿ ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, 1997 ರಲ್ಲಿ ವೀರಚಕ್ರ ಪ್ರಶಸ್ತಿ, ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ ಇವರಿಂದ ಮಾನ್ಯತೆಯ ಪ್ರಮಾಣ ಪತ್ರ, ಭಾರತೀಯ ವೃಕ್ಷ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ, ಬೆಂಗಳೂರು ಇವರಿಂದ ಶ್ಲಾಘನೆಯ ಪ್ರಮಾಣ ಪತ್ರ ತಿಮ್ಮಕ್ಕ ಅವರಿಗೆ ಲಭಿಸಿದೆ.

ಅಷ್ಟೇ ಅಲ್ಲದೆ, 2000 ದಲ್ಲಿ ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ, 2004ರಲ್ಲಿ ಗಾಡ್ ಫ್ರಿ ಫಿಲಿಪ್ಸ್ ಧೀರತೆ ಪ್ರಶಸ್ತಿ, ಪಂಪಾವತಿ ಪರಿಸರ ಪ್ರಶಸ್ತಿ, ಬಾಬಾಸಾಹೇಬ್ ಅಂಬೇಡ್ಕರ್ ಪ್ರಶಸ್ತಿ, ವನಮಾತೆ ಪ್ರಶಸ್ತಿ, ಶ್ರೀಮಾತಾ ಪ್ರಶಸ್ತಿ, ಕರ್ನಾಟಕ ಪರಿಸರ ಪ್ರಶಸ್ತಿ, ನ್ಯಾಷನಲ್ ಸಿಟಿಜನ್ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹೀಗೆ ಹಲವು ಪ್ರಶಸ್ತಿಗಳು ವೃಕ್ಷಮಾತೆಯ ಮುಡಿಗೇರಿವೆ.

ಇದಲ್ಲದೆ, ಅವರಿಗೆ ಹಂಪಿ ವಿಶ್ವವಿದ್ಯಾನಿಲಯದಿಂದ ನಾಡೋಜ ಪ್ರಶಸ್ತಿ (2010), ರಾಷ್ಟ್ರೀಯ ನಾಗರಿಕ ಪ್ರಶಸ್ತಿ (1995), ಇಂದಿರಾ ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿಗಳು (1997), ವೀರ ಚಕ್ರ ಪ್ರಶಸ್ತಿ (1997) ಮತ್ತು ಕರ್ನಾಟಕ ಕಲ್ಪವಲ್ಲಿ ಪ್ರಶಸ್ತಿ (2000) ಮುಂತಾದವುಗಳನ್ನು ನೀಡಲಾಯಿತು.

2016ರಲ್ಲಿ ತಿಮ್ಮಕ್ಕ ಅವರನ್ನು ಬಿಬಿಸಿ ಯು, ವಿಶ್ವದ ಅತ್ಯಂತ ಪ್ರಭಾವಶಾಲಿ ಮತ್ತು ಸ್ಫೂರ್ತಿದಾಯಕ ಮಹಿಳೆಯರಲ್ಲಿ ಒಬ್ಬರು ಎಂದು ಪಟ್ಟಿ ಮಾಡಿದೆ. ಈ ವರ್ಷದ ಆರಂಭದಲ್ಲಿ ಕರ್ನಾಟಕ ಸರ್ಕಾರವು ತಿಮ್ಮಕ್ಕ ಅವರಿಗೆ ಕ್ಯಾಬಿನೆಟ್ ದರ್ಜೆ ಸ್ಥಾನಮಾನವನ್ನು ನೀಡಿದೆ. ತಿಮ್ಮಕ್ಕ ಅವರನ್ನು ಪರಿಸರ ರಾಯಭಾರಿಯಾಗಿ ನೇಮಕ ಮಾಡಿದೆ.

ತಿಮ್ಮಕ್ಕ ಅವರಿಗೆ 112 ವರ್ಷ ವಯಸ್ಸಾಗಿದ್ದು, ಇಂದಿಗೂ ತಮ್ಮ ಆರೋಗ್ಯ ಸಮಸ್ಯೆಗಳನ್ನು ಬದಿಗೊತ್ತಿ,

ಕಾಲೇಜುಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದಾರೆ. ಈ ಕಾರ್ಯಕ್ರಮಗಳಲ್ಲಿ ಪರಿಸರ ಸಂರಕ್ಷಣೆ ಕುರಿತು ಸಂದೇಶಗಳನ್ನು ನೀಡುತ್ತಿದ್ದಾರೆ.

ಸಾಧನೆ ಮಾಡಲು ಯಾವುದೇ ಪದವಿ, ನೆರವು, ಅವಕಾಶದ ಅಗತ್ಯವಿಲ್ಲ. ಕಾಯಕ ನಿಷ್ಠೆ ಇಟ್ಟುಕೊಂಡು ಎಲ್ಲರಿಗೂ ಒಳ್ಳೆಯದು ಮಾಡಬೇಕು ಎಂಬ ಧ್ಯೇಯ ಇದ್ದರೆ ಜಗತ್ತನ್ನೆ ಬದಲಾವಣೆ ಮಾಡುವ ಶಕ್ತಿ ಆಗಬಹುದು ಎಂಬುದಕ್ಕೆ ತಿಮ್ಮಕ್ಕ ನಿದರ್ಶನವಾಗಿದ್ದಾರೆ.

ತಿಮ್ಮಕ್ಕ ಅವರು ತಮಗೆ ತಾವೇ ಅವಕಾಶ ಮಾಡಿಕೊಂಡು ಸಾಧನೆ ಮಾಡಿದ ಮಹಿಳೆಯಾಗಿದ್ದಾರೆ. ಅವರ ಸಾಧನೆ ಇಂದು ಈ ಜಗತ್ತಿನಲ್ಲಿಯೇ ಜೀವಂತವಾಗಿ ಉಳಿಯಲಿದೆ.

ಹಸಿರೇ ನಮ್ಮ ಉಸಿರು ಎನ್ನುವುದು ಬರಿ ಬಾಯಿಮಾತಿಗಷ್ಟೇ ಉಳಿಯಬಾರದು, ಹಸಿರನ್ನು ಬೆಳೆಸಿದಷ್ಟೂ ನಮ್ಮ ಈ ಉಸಿರು ಉಳಿವುದು ಎಂಬುದನ್ನು ಮನದಟ್ಟು ಮಾಡಿಕೊಳ್ಳುವ ಅನಿವಾರ್ಯತೆ ನಮಗೆ ಈಗ ಬಂದಿದೆ.

ಭೂಮಿಯ ತಾಪಮಾನ ದಿನದಿಂದ ದಿನಕ್ಕೆ ಏರುತ್ತಿದ್ದು ಇದಕ್ಕೆ ನಾವು ಮಾಡುತ್ತಿರುವ ಹಸಿರು ನಾಶವೇ ಬಹುದೊಡ್ಡ ಕಾರಣ ಎಂಬುದು ನಮಗೆ ಅರಿವಾಗಬೇಕು, ಇನ್ನಾದರೂ ನಾವು ಎಚ್ಚೆತ್ತುಕೊಳ್ಳಬೇಕು.

ಮುಂದಿನ ಯುವಪೀಳಿಗೆಗೆ ಗಿಡ ನೆಟ್ಟು ಹಸಿರು ಉಳಿಸಿ ಎಂಬ ಒಂದು ಗಟ್ಟಿಯಾದ ಸಂದೇಶವನ್ನು ನೀಡಿದ ಗಟ್ಟಿಗಿತ್ತಿ ಸಾಲುಮರದ ತಿಮ್ಮಕ್ಕ ನಮ್ಮೆಲ್ಲರಿಗೂ ಆದರ್ಶಪ್ರಾಯರು. ನಾವು ಓಡಾಡುವ ರಸ್ತೆಯಲ್ಲಿಯೇ ಅವರು ನೆಟ್ಟ ಮರಗಳನ್ನು ನೋಡಿ ನಾವು ಅವರಂತೆಯೇ ಪರಿಸರವನ್ನು ಉಳಿಸಿ ಬೆಳೆಸೋಣ ಅಲ್ಲವೇ....!

## FRESHER'S DAY-2024

"Fresher's party" in any college is an event which every student eagerly awaits from their time of admission. The fresher's day was filled with excitement, joy and moment of enthusiasm.

The fresher's were warmly welcomed with open arms, open minds and open heart to start their new journey of getting graduated on 6th September 2024. A good self introduction for students creates on everlasting impression as it builds confidence and enhance one's ability to meet new people and present themselves well.






The programme started with cake cutting by our madam principal Smt. Shyamala Shetty. The programme began with an invocation followed by the senior students sharing their experience Madam Principal greeted the fresher's and spoke about the norms of college learning process, discipline and programmes to be conducted throughout their journey. The students of different classes entertained the audiences with dance performances. The day was indeed a day of memory which will be instilled in the minds of everyone for the longest time.

Graduation day is a momentous occasion in the lives of students, families and educators.

# ಸೆಪ್ಟೆಂಬರ್ 5ರ ಶಿಕ್ಷಕರ ದಿನಾಚರಣೆ

ಗುರುಬ್ರಹ್ಮ ಗುರುವಿಷ್ಣುಃ
ಗುರುರ್ದೇವೋ ಮಹೇಶ್ವರಃ
ಗುರುಃ ಸಾಕ್ಷಾತ್ ಪರಂ ಬ್ರಹ್ಮ
ತಸ್ಮೈ ಶ್ರೀ ಗುರವೇ ನಮಃ




ಇಲ್ಲಿ ಶಿಕ್ಷಕ ಅಥವಾ ಗುರುವನ್ನು ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಹೋಲಿಸಲಾಗಿದೆ.

ಪ್ರತಿ ವ್ಯಕ್ತಿಯೂ ತಮ್ಮ ಜೀವನದಲ್ಲಿ ತಂದೆ ತಾಯಿಯ ನಂತರದ ಸ್ಥಾನವನ್ನು ಒಬ್ಬ ಗುರುವಿಗೆ ನೀಡುತ್ತಾರೆ. ಉತ್ತಮ ಶಿಕ್ಷಣ ನೀಡುವುದರ ಜೊತೆಗೆ, ಶಿಕ್ಷಣದ ಮೂಲಾರ್ಥವನ್ನು ತಿಳಿಸಿ, ಪ್ರತಿ ವ್ಯಕ್ತಿಯ ಬದುಕಿನ ಜೊತೆಗೆ ಸಮಾಜವನ್ನು ಬೆಳಗುವವರು ಶಿಕ್ಷಕರಾಗಿರುವುದರಿಂದ, ಇಡೀ ಪ್ರಪಂಚವೇ ಅವರನ್ನು ಅಗ್ರಸ್ಥಾನದಲ್ಲಿಟ್ಟು ಪೂಜಿಸುತ್ತದೆ, ನಮ್ಮ ಇಂದಿನ ಹಾಗು ಮುಂದಿನ ಪೀಳಿಗೆಗೆ ಶಿಕ್ಷಕರ ಮಹತ್ವ ಹಾಗು ಅವರಿಗೆ ನಾವು ನೀಡಬೇಕಾದ ಗೌರವದ ಬಗ್ಗೆ ತಿಳಿಸುವ ಕಾಳಜಿಯಿಂದ ಆಯೋಜಿಸಲಾದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಂಟರ ಸಂಘ ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ಸಿ.ಎ. ಅಶೋಕ್ ಶೆಟ್ಟಿ ಎಂ. ಇವರು ವಹಿಸಿ ಮಾತನಾಡಿ, ಶಿಕ್ಷಕರಿಗೆ ಗೌರವ ಸೂಚಿಸಿದರು.

ಕಾರ್ಯಕ್ರಮ ಆಯೋಜಕರು ಹಾಗು ಯುವ ಸಮಿತಿಯ ಚೇರ್ ಪರ್ಸನ್ ಆದ ಶ್ರೀ ಅಜಿತ್ ವಿ. ಶೆಟ್ಟಿ ಅವರು, ಮಾತನಾಡಿ "ಸಮಾಜದ ಪ್ರತಿ ವ್ಯಕ್ತಿಯು ಇಂದು ಒಂದು ಉತ್ತಮ ಸ್ಥಾನದಲ್ಲಿ ಇರುವುದಕ್ಕೆ ಶಿಕ್ಷಕರೇ ಮೂಲ ಕಾರಣ, ಲಕ್ಷಾಂತರ ಮಕ್ಕಳಿಗೆ ವಿದ್ಯೆ ದಾನ ಮಾಡುವ ಅವರ ಕೆಲಸಕ್ಕೆ ಹಾಗು ಅವರಿಗೆ ಅಭಿನಂದನೆ ಸಲ್ಲಿಸುವ ಸುಯೋಗ ಸಿಕ್ಕಿರುವುದು ಖುಷಿ ತರಿಸಿದೆ" ಎಂದರು.

ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಉಷಾ ಸಂತೋಷ್ ಅವರು ಮಾತನಾಡಿ ಯುವ ಸಮಿತಿಯು ನಮ್ಮ ಶಿಕ್ಷಕರಿಗೆ ಹಬ್ಬದ ವಾತಾವರಣ ಭಾಸವಾಗುವಂತೆ ಮಾಡಿದೆ, ಎಂದು ಗುರುತಿಸಿ, ಗೌರವಿಸಿದ ಎಲ್ಲರಿಗೂ ಶಾಲೆಯ ಪರವಾಗಿ ಧನ್ಯವಾದ ಸಮರ್ಪಿಸಿದರು.

ಕಾರ್ಯಕ್ರಮದಲ್ಲಿ ಗೌರವಾನ್ವಿತ ಕಾರ್ಯದರ್ಶಿಗಳಾದ ವಿಜಯ್ ಜೆ. ಶೆಟ್ಟಿ ಹಾಲಾಡಿ, ಬಂಟರ ಸಂಘ ಬೆಂಗಳೂರು ಎಲ್ಲಾ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು, ಯುವ ವಿಭಾಗದ ಸಂಚಾಲಕರಾದ ಪ್ರಸಾದ್ ಶೆಟ್ಟಿ ಅರೆಹೊಳೆ ಹಾಗು ಸಂಪೂರ್ಣ ಯುವ ಉಪ ಸಮಿತಿಯ ಸದಸ್ಯರುಗಳು ಯಶಸ್ವಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಸೆಪ್ಟೆಂಬರ್ 5 ರ ಶಿಕ್ಷಕರ ದಿನಾಚರಣೆಯನ್ನು ನಮ್ಮ ಬಂಟರ ಸಂಘದ ವತಿಯಿಂದ ಆರ್.ಎನ್.ಎಸ್. ವಿದ್ಯಾನಿಕೇತನ ಬೆಂಗಳೂರು ಇಲ್ಲಿನ ಯುವ ಸಮಿತಿಯು ಬೋಧಕ ವೃಂದದವರೊಂದಿಗೆ ಅವರಿಗೆ ಅಭಿನಂದನೆ ಸಲ್ಲಿಸುವ ಮೂಲಕ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಹಾಗೂ "ಬಂಟರ ಸಂಘ ಬೆಂಗಳೂರು ಯುವ ಸಮಿತಿಯ" ವತಿಯಿಂದ ಎಲ್ಲಾ ಶಿಕ್ಷಕ, ಶಿಕ್ಷಕಿಯರಿಗೂ ಸಿಹಿತಿಂಡಿ ಹಾಗು ಪೆನ್ನುಗಳನ್ನು ಹಂಚುವ ಮೂಲಕ ಅತ್ಯಂತ ಅರ್ಥಪೂರ್ಣ ಹಾಗು ಅದ್ಭುತವಾಗಿ ಮೂಡಿಬಂದಿತು.

# ಬಂಟರ ಸಂಘ ಬೆಂಗಳೂರು
# ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಗಣೇಶ ಚತುರ್ಥಿ ಆಚರಣೆ

ದಿನಾಂಕ 07.09.2024, ಶನಿವಾರದಂದು ಗಣೇಶ ಚತುರ್ಥಿ ಆಚರಣೆಯನ್ನು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ಶ್ರೀ ಗಣೇಶ ಮೂರ್ತಿಯ ಪ್ರತಿಷ್ಠಾಪನೆಯೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು.

ಸಂಕೀರ್ಣದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನ ಅನುಗ್ರಹದಿಂದ ಆಯೋಜಿಸಿದ ಎಲ್ಲಾ ಕಾರ್ಯಕ್ರಮಗಳು ನಿರ್ವಿಘ್ನವಾಗಿ ನೆರವೇರಿತು. ಸಂಘದ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ. ದಂಪತಿ, ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ ದಂಪತಿ ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಶೋಭಾ ಶೇಖ ದಂಪತಿಗಳ ಪೂಜಾ ದೀಕ್ಷೆಯೊಂದಿಗೆ ಹಾಗೂ ಸಾವಿರಾರು ಭಕ್ತರ ಸಮ್ಮುಖದಲ್ಲಿ ಹಲವಾರು ಕಾರ್ಯಕ್ರಮಗಳು ನಡೆಯಿತು.



ಬೆಳಿಗ್ಗೆ 8.00 ಗಂಟೆಗೆ ವಿನಾಯಕನಿಗೆ ವಿಶೇಷ ಪಂಚಾಮೃತ ಅಭಿಷೇಕ, ಗಣಪತಿ ಹೋಮ, 10.30ಕ್ಕೆ ಮಂದಿರದ ಮುಂಭಾಗದಲ್ಲಿ ಗಣೇಶ ಮೂರ್ತಿಯ ಪ್ರತಿಷ್ಠಾಪನೆ ಹಾಗೂ ಕಲ್ಪೋಕ್ತ ಪೂಜೆ ಹಾಗೂ ಬೆಳಿಗ್ಗೆ 11.00 ಗಂಟೆಗೆ ಮಕರಶ್ರೀ ಭಜನಾ ಮಂಡಳಿ ಇವರಿಂದ ಭಜನಾ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ ಸುಮಾರು 2500ಕ್ಕೂ ಅಧಿಕ ಭಕ್ತಾದಿಗಳಿಗೆ ಭೋಜನ ಪ್ರಸಾದವನ್ನು ಏರ್ಪಡಿಸಿದ್ದ ಶ್ರೀ ಸುಬ್ರಹ್ಮಣ್ಯ ಶೆಟ್ಟಿ ತಂತ್ರಾಡಿ ಮತ್ತು ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಹೆಚ್. ಜಗನ್ನಾಥ ಶೆಟ್ಟಿ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಗಣೇಶ ಚತುರ್ಥಿ ಕಾರ್ಯಕ್ರಮಕ್ಕೆ ದೇಣಿಗೆ ನೀಡಿದ ದಾನಿಗಳನ್ನು ಮಂದಿರದಲ್ಲಿ ಫಲಪುಷ್ಪ ತಾಂಬೂಲ ನೀಡಿ ಅಭಿನಂದಿಸಲಾಯಿತು. ನಂತರ ಸಂಘದ ಯಕ್ಷಗಾನ ಸಮಿತಿಯ ವತಿಯಿಂದ ಏರ್ಪಡಿಸಲಾಗಿದ್ದ ಕರ್ಣ ಪರ್ವ ಯಕ್ಷಗಾನವು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಯಕ್ಷಗಾನ ಕಾರ್ಯಕ್ರಮಕ್ಕೆ ಸಂಪೂರ್ಣ ಸಹಕಾರವನ್ನು ನೀಡಿದ ಸಂಘದ ಯಕ್ಷಗಾನ ಸಮಿತಿಯ ಚೇರ್‌ಪರ್ಸನ್ ಮೂಡುಬಗೆ ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಹಾಗೂ ಯಕ್ಷಗಾನ ಸಮಿತಿ ಸದಸ್ಯರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.



ಸಂಜೆ 7.00ಕ್ಕೆ ಶ್ರೀ ದೇವರ ಮೂರ್ತಿಯನ್ನು ವಿಜೃಂಭಣೆಯಿಂದ ಬಂಟರ ಸಂಘದ ಆವರಣದಿಂದ ಹೊರಟು ವಿಜಯನಗರದ ಮತ್ತು ಚಂದ್ರಾ ಲೇಔಟ್ ಸುತ್ತಮುತ್ತ ಮೆರವಣಿಗೆಯ ಮೂಲಕ ಚಂದ್ರಾ ಲೇಔಟ್‌ನಲ್ಲಿ ವಿಸರ್ಜಿಸಲಾಯಿತು. ಶ್ರೀ ನಗರ ನಾದ ತರಂಗ ಚೆಂಡೆ ಮತ್ತು ಬಂಟ್ವಾಳ ಶ್ರೀ ಶಾರದ ಆರ್ಟ್ಸ್ ಜಾನಪದ ಗೊಂಬೆ ಬಳಗ ಇವರ ಕೀಲು ಗೊಂಬೆ ವಿಶೇಷ ಆಕರ್ಷಣೆಯಾಗಿತ್ತು.

ಹೋಟೆಲ್ ಉದ್ಯಮಿ ಶ್ರೀ ಸುಧಾಕರ ಶೆಟ್ಟಿ (ಕೂಲ್ ಕಾರ್ನರ್) ದೇವಸ್ಥಾನಕ್ಕೆ ಪ್ರತೀ ವರ್ಷವೂ ಹೂವಿನ ಅಲಂಕಾರ ಮಾಡಿ ಕೊಡುತ್ತಿದ್ದು ಈ ವರ್ಷವೂ ಅವರೇ ಅದರ ಸಂಪೂರ್ಣ ವೆಚ್ಚವನ್ನು ಭರಿಸಿದ್ದಾರೆ. ಇವರಿಗೂ ಸಂಘದ ಪರವಾಗಿ ಅಭಿನಂದನೆಗಳು.

ಖ್ಯಾತ ಕೃಷಿ ಉದ್ಯಮಿ, ಕೊಡುಗೈ ದಾನಿಗಳಾದ ಶ್ರೀಮತಿ ಸುಜಯಾ ಹಾಗೂ ಶ್ರೀ ಇರ್ಮಾಡಿ ಜಯಪ್ರಸಾದ ಶೆಟ್ಟಿ ದಂಪತಿಗಳು ದೇವಸ್ಥಾನಕ್ಕೆ ವರ್ಷಂಪ್ರತಿಯಂತೆ ಅಂದವಾದ ಚಪ್ಪರವನ್ನು ಹಾಕಿಕೊಡುವುದರ ಜೊತೆಯಲ್ಲಿ ಧನ ಸಹಾಯವನ್ನು ಮಾಡಿದ್ದಾರೆ. ಇವರಿಗೂ ಸಂಘದ ಪರವಾಗಿ ಅಭಿನಂದನೆಗಳು.

ಶ್ರೀ ಗಣೇಶ ಮೂರ್ತಿಯನ್ನು ನೀಡಿದ ಶೀಲಾ ಇಕ್ವಿಪ್‌ಮೆಂಟ್‌ನ ಶ್ರೀ ರವೀಂದ್ರನಾಥ ಮಾರ್ಲ ಮತ್ತು ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ ದಂಪತಿಗಳಿಗೆ ಸಂಘದ ಪರವಾಗಿ ಅಭಿನಂದನೆಗಳು.

ಈ ಎಲ್ಲಾ ಪೂಜಾ ಕಾರ್ಯಕ್ರಮಗಳಲ್ಲಿ ಸಹಕರಿಸಿದ ಸಂಘದ ಮಾಜಿ ಅಧ್ಯಕ್ಷರುಗಳು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸಂಘದ ಹಾಲಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಪ್ರಾರ್ಥನಾ ಮಂದಿರ ಸಮಿತಿ ಸದಸ್ಯರು ಮತ್ತು ಭಕ್ತಾದಿಗಳಿಗೆ ಹೃತ್ಪೂರ್ವಕ ವಂದನೆಗಳು. ಅನ್ನದಾನಕ್ಕೆ ಧನಸಹಾಯ ಮಾಡಿದ ಸಂಘದ ಎಲ್ಲಾ ಸದಸ್ಯರಿಗೂ ವಂದನೆಗಳು.



**ಈ ಸಮಾರಂಭಕ್ಕೆ ಧನ ಸಹಾಯ ನೀಡಿದವರು:**

ಶ್ರೀಮತಿ ಶ್ವೇತಾ ಸುನೀಲ್ ಶೆಟ್ಟಿ
ಶ್ರೀಮತಿ ರಾಜಮ್ಮ ಹೆಗ್ಡೆ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ
ಶ್ರೀಮತಿ ಸುಜಾತ ಹೆಗ್ಡೆ
ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ
ಶ್ರೀ ವಿಜಯ್ ಕುಮಾರ್ ಶೆಟ್ಟಿ
ಶ್ರೀ ರಮಿತ್ ಬಿ. ಶೆಟ್ಟಿ
ಶ್ರೀ ಆನಂದರಾಮ ಶೆಟ್ಟಿ ಬಿ.
ಶ್ರೀ ಅಜಿತ್ ಶೆಟ್ಟಿ ಕೆಂಚನೂರು
ಶ್ರೀಮತಿ ಶಕುಂತಲಾ ಶೆಟ್ಟಿ
ಶ್ರೀ ಅಶೋಕ್ ಶೆಟ್ಟಿ, ಸ್ಕೈ ಹೆವೆನ್
ಶ್ರೀ ಸತೀಶ್ ಕುಮಾರ್ ಶೆಟ್ಟಿ
ಶ್ರೀ ವಸಂತ್ ಶೆಟ್ಟಿ, ಬಾಂಬೆ
ಶ್ರೀ ರಮಾನಂದ ಶೆಟ್ಟಿ, ದುಬೈ
ಶ್ರೀ ಪ್ರವೀಣ್ ಶೆಟ್ಟಿ
ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು
ಶ್ರೀ ಪ್ರಸಾದ್ ಕುಮಾರ್ ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀ ಸಂತೋಷ್ ಶೆಟ್ಟಿ ಜೆ.
ಡಾ. ನಿಶಾಕಾಂತ್ ಬಿ. ಶೆಟ್ಟಿ
ಶ್ರೀ ಅಜಿತ್ ವಿ. ಶೆಟ್ಟಿ
ಶ್ರೀ ಉಮೇಶ್ ಶೆಟ್ಟಿ ಎಂ.ಬಿ.
ಶ್ರೀ ಸಿ.ಎ. ಕಿಶೋರ್ ಶೆಟ್ಟಿ
ಶ್ರೀ ಪ್ರಶಾಂತ್ ಶೆಟ್ಟಿ
ಶ್ರೀಮತಿ ಸರ್ವಾಣಿ ಗಿರೀಶ್ ರೈ
ಶ್ರೀ ಗಣೇಶ್ ರೈ
ಶ್ರೀಮತಿ ಗೀತಾ ಶೆಟ್ಟಿ
ಶ್ರೀ ಮಹೇಂದ್ರ ಶೆಟ್ಟಿ
ಶ್ರೀ ಕೀರ್ತನ್ ಶೆಟ್ಟಿ
ಶ್ರೀ ದೀಪಕ್ ಶೆಟ್ಟಿ
ಶ್ರೀ ಸಂತೋಷ್
ಶ್ರೀ ಮುರಲೀಧರ ಹೆಗ್ಡೆ
ಶ್ರೀ ಉದಯ್ ಶೆಟ್ಟಿ
ಶ್ರೀ ಡಿ. ಬಿ. ಪ್ರತಾಪ್ ಶೆಟ್ಟಿ
ಶ್ರೀಮತಿ ರಾಜಶ್ರೀ ಶೇಖರ್ ಶೆಟ್ಟಿ
ಶ್ರೀಮತಿ ಮಾಲಾ ಅರುಣ್ ಶೆಟ್ಟಿ
ಶ್ರೀ ದೇವೇಂದ್ರ ಹೆಗ್ಡೆ ಕೊಕ್ರಾಡಿ
ಶ್ರೀಮತಿ ಅಕ್ಷತಾ ಶೆಟ್ಟಿ
ಶ್ರೀ ವಿಠ್ಠಲ್ ಎಸ್. ರೈ
ಶ್ರೀಮತಿ ತಾರಾಮಣಿ ಹೆಗ್ಡೆ
ಶ್ರೀ ಕೊರ್ಗಿ ಗೋಪಾಲ್ ಶೆಟ್ಟಿ
ಶ್ರೀ ಬಾಲಕೃಷ್ಣ ಚೌಟ ಅಭಿಷ್ಟ ಫ್ಯಾಷನ್
ಡಾ. ಜಗದೀಶ್ ವಿ. ಶೆಟ್ಟಿ
ಶ್ರೀ ಅಭಯ್ ಶೆಟ್ಟಿ
ಶ್ರೀ ಭವಾನಿ ಪ್ರಸನ್ನ ಕುಮಾರ್ ಶೆಟ್ಟಿ
ಶ್ರೀ ಸೂರ್ಯ ಶೆಟ್ಟಿ

**ಅನ್ನಸಂತರ್ಪಣೆಗೆ ಸಹಾಯ ನೀಡಿದ ಇತರ ದಾನಿಗಳು**

| | |
|---|---|
| ಅಕ್ಕಿ | – ಶ್ರೀ ಸುರೇಂದ್ರ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು |
| ಲಡ್ಡು | – ಶ್ರೀ ಭೋಜರಾಜ್ ಶೆಟ್ಟಿ ಕೊರ್ಗಿ, ಮಾಜಿ ಉಪಾಧ್ಯಕ್ಷರು |
| ಹೋಳಿಗೆ | – ಶ್ರೀಮತಿ ಶೋಭಾ ಶೇಖ, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಶ್ರೀ ಶಶಿಕಾಂತ್ ಶೇಖ |
| ಕಡ್ಲೆ, ಅವಲಕ್ಕಿ ಪ್ರಸಾದ | – ಶ್ರೀಮತಿ ಹೇಮಲತಾ ವೇಣುಗೋಪಾಲ್ ಶೆಟ್ಟಿ |
| ಪ್ರಸಾದದ ತಟ್ಟೆ (ದೊನ್ನೆ) | – ಶ್ರೀ ಮಹೇಶ್ ಶೇಖ |
| ಮೋದಕ | – ಮೂಡುಬಗೆ ಶ್ರೀ ಸಂತೋಷ್ ಕುಮಾರ್ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು |
| ಸಂಜೆ ಉಪಾಹಾರ ಮತ್ತು ಬೆಲ್ಲ | – ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ, ಕಾರ್ಯಕಾರಿ ಸಮಿತಿ ಸದಸ್ಯರು |
| ಮಲ್ಲಿಗೆ ಮತ್ತು ಸಿಂಗಾರ | – ಶ್ರೀ ಸುನೀಲ್ ಕುಮಾರ್ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು |

**ಈ ದೇವತಾ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಭಕ್ತಾದಿಗಳಿಗೂ ಪ್ರಾರ್ಥನಾ ಮಂದಿರ ಸಮಿತಿಯ ಪರವಾಗಿ ವಂದನೆಗಳು.**

**ಪ್ರಸಾದ್ ಕುಮಾರ್ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ

**ಶೋಭಾ ಶೇಖ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

# BUNTS SANGHA BANGALORE
## Matrimonial Services - September - 2024

**Boys New Profiles**

| CODE NO | DOB | HEIGHT | EDCUCATION | OCCUPATION |
|---|---|---|---|---|
| 202/B/2022 | 10.10.1988 | 6.00" | MBA (pusuing) | Tata steel |
| 202/B/2022 | 15.05.1983 | 6.00" | MA | Manager |
| 203/B/2022 | 15.11.1988 | 5.8" | M.D (Ayurvedic) | Doctor |
| 206/B/2022 | 23.09.1991 | 5.6" | BE | Project Engineer |
| 207/B/2022 | 16.03.1989 | 5.7" | D.Pharma | Retail Chemist and Wholesale Distribution |
| 209/B/2022 | 09.08.1994 | 5.8" | Diploma | |
| 211/B/2022 | 05.05.1992 | 5.8" | MD Neurology, Epilepsy Fellowship | Epilepsy Neurologist |
| 212/B/2022 | 07.04.1982 | 6.2" | MBA | |
| 213/B/2022 | 13.11.1987 | 5.5" | Degree | Business |
| 214/B/2022 | 06.09.1990 | 5.10" | B.Com | Quality Assurance |
| 215/B/2022 | 24.05.1991 | 5.7" | BE (Electronics and Communication) | Senior Engineer |
| 216/B/2022 | 07.06.1988 | 5.5" | CA Inter (Cleared Group 1) | Finance and Taxation Consultant |
| 217/B/2022 | 06.06.1986 | 5.10" | B.Com | Senior Accountant |
| 218/B/2022 | 10.08.1985 | 5.7" | 2nd PUC | Business |
| 221/B/2022 | 17.07.1991 | 5.6" | B.Com | Manager |
| 226/B/2022 | 09.12.1985 | 5.8" | SSLC | Running Canteen in Partnership in Bangalore |
| 227/B/2022 | 14.03.1985 | 6.1" | B.Com | Gateway Supervisors DHL |
| 228/B/2022 | 21.06.1991 | 5.5" | BE, MBA | Senior Consultant |
| 229/B/2022 | 04.04.1990 | | BBM | Accenture, Bangalore |
| 231/B/2022 | 13.03.1980 | 5.7" | B.Com | Accountant |
| 233/B/2022 | 07.04.1982 | 6.2" | MBA | Wealth Manager, Mutual Fund Advisor |
| 235/B/2022 | 29.03.1994 | 5.6" | BE (ECE) | Software Developer |
| 237/B/2022 | 12.05.1987 | 5.8" | B.Com | Business |
| 239/B/2022 | 30.08.1985 | 5.10" | Diploma | Business |
| 240/B/2022 | 17.06.1991 | 5.11" | M.Tech | Security Analyst |
| 242/B/2022 | 31.07.1976 | 5.7" | B.Com | Cargo Commercial Associate |
| 243/B/2022 | 06.03.1987 | 5.1 | MBA, MSW, MA | Lecturer |
| 246/B/2022 | 04.12.1990 | 5.8" | BSW | Working |
| 247/B/2022 | 27.08.1990 | 5.8" | MBA, BE | Middle Market Business Manager |
| 249/B/2022 | 21.12.1987 | 5.7" | BE | Working |
| 250/B/2023 | 30.08.1990 | 6.2" | BE | Running own bosch authorised workship |
| 251/B/2023 | 24.01.1989 | 6.0" | Diploma in Computer Sc. & Engg | Working |
| 252/B/2023 | 10.02.1992 | | BE, PGDM, MBA | Asst. Manager |
| 253/B/2022 | 05.07.1993 | 5.10" | BBM, MBA (Finance) | Analyst in JP Morgen Financial Services |
| 254/B/2022 | 13.03.1983 | 5.10" | BBM, MBA | Sr. Manager |
| 255/B/2023 | 17.11.1991 | 5.9" | B.Com | Manager |
| 256/B/2023 | 27.05.1990 | 6.0" | B.Com | Finance |
| 258/B/2023 | 24.07.1983 | 5.4" | B.Com | Kundeshwara Granites and Private Contracts |
| 259/B/2023 | 09.05.1985 | 5.7" | PUC | Hotel Managemenr |
| 260/B/2023 | 05.08.1986 | 5.9" | PUC | Bar Manager |
| 261/B/2023 | 31.07.1990 | 6.0" | MBA in Finace | SBI Mangalore |
| 264/B/2023 | 09.01.1986 | 5.9" | BE, MBA | Asst. Professor |
| 265/B/2023 | 12.05.1992 | 5.9" | ITI | Pramuk Infracon LLP |
| 266/B/2023 | 04.03.1993 | 5.6" | BE | Robert Bosch |
